...ದನ್ಯಾಸ
...ಥಮಾಲೆ

...೫೯

ಕನ್ನಡ-ಕೊಂಕಣಿ ಜನಪದ ಸಾಹಿತ್ಯ

ಎಲ್. ವ್ಹಿ. ಪೈ



ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಜುಲೈ, ೧೯೭೩

ಕನ್ನಡ-ಕೊಂಕಣಿ ಜನಪದ ಸಾಹಿತ್ಯ

ಉಪನ್ಯಾಸ ಗ್ರಂಥಮಾಲೆ

೧೫೯

ಕನ್ನಡ-ಕೊಂಕಣಿ ಜನಪದ ಸಾಹಿತ್ಯ

ಎಲ್. ವ್ಹಿ. ಶೈ

ಕರ್ನಾಟಕ ವಿಶ್ವವಿದ್ಯಾಲಯ,

ಧಾರವಾಡ

ಜುಲೈ, ೧೯೭೩

ಪ್ರಕಾಶಕರು :
ಎಸ್. ಎಸ್. ಒಡೆಯರ, ಎಂ. ಎ., ಎಲ್‌ಎಲ್.ಬಿ.
ಕುಲಸಚಿವರು,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪ್ರಥಮ ಮುದ್ರಣ : ಜುಲೈ, ೧೯೭೩
೫,೦೦೦ ಪ್ರತಿಗಳು

ಬೆಲೆ ೨೫ ಪೈಸೆ

ಮುದ್ರಕರು :
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ,
ಧಾರವಾಡ–೩

ಮುನ್ನುಡಿ

ನಮ್ಮ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ವಿಭಾಗವು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿ ತಿಂಗಳು ಏರ್ಪಡಿಸುತ್ತಿರುವ ಉಪನ್ಯಾಸ ಶಿಬಿರಗಳು ದಿನೇ ದಿನೇ ಜನಪ್ರಿಯವಾಗುತ್ತ ಸಾಗಿರುವುದು ನಿಜವಾಗಿಯೂ ಸಂತೋಷದ ಸಂಗತಿ. ಈ ಜ್ಞಾನಪ್ರಸಾರದ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕವೊದಗುವದಲ್ಲದೆ ಎಂಥ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭವಾದ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೧೫೮ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು-ಐದು ಮುದ್ರಣಗಳನ್ನೂ ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯ ಧನಸಹಾಯ ಆಯೋಗದವರು ಉಪನ್ಯಾಸ ಶಿಬಿರಗಳಿಗೂ, ಈ ಪುಸ್ತಕಗಳ ಪ್ರಕಟನೆಗೂ ನೆರವು ನೀಡುತ್ತಿದ್ದು ಅವರಿಗೆ ವಿಶ್ವವಿದ್ಯಾಲಯವು ತನ್ನ ಕೃತಜ್ಞತೆಗಳನ್ನು ಸೂಚಿಸುತ್ತದೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖವಾದ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
೧೨-೭-೧೯೭೩

ಎ. ಎಸ್. ಅಡಕೆ
ಕುಲಪತಿ

ಅರಿಕೆ.

ಕರ್ನಾಟಕ ವಿಶ್ವವಿದ್ಯಾನಿಲಯದ ವ್ಯಾಸಂಗ ವಿಸ್ತರಣ ಮಾಲೆಯ ಕಾರ್ಯಕ್ರಮದ ಅಂಗವಾಗಿ ನಾನು ದಿನಾಂಕ ೩-೨-೧೯೭೩ ರಂದು ಧಾರವಾಡ ಜಿಲ್ಹೆಯ 'ಸವಣೂರಿ'ನಲ್ಲಿ "ಕನ್ನಡ-ಕೊಂಕಣಿ ಜನಪದ ಸಾಹಿತ್ಯ" ಎಂಬ ವಿಷಯವಾಗಿ ಮಾತಾಡಿದೆ. ಆ ಉಪನ್ಯಾಸವನ್ನೇ ಈ ರೀತಿ ಪುಸ್ತಿಕೆಯ ರೂಪದಲ್ಲಿ ಬರೆಯಲಾಗಿದೆ.

ಕೊಂಕಣಿ ಜನಪದ ಸಾಹಿತ್ಯದತ್ತ ಮೊಟ್ಟ ಮೊದಲು ನನ್ನ ಗಮನ ಹರಿಸಲು ಪ್ರೇರಣೆ-ಸಹಾಯಗಳನ್ನಿತ್ತವರು ನನ್ನ ವಿದ್ಯಾಗುರುಗಳೂ, ಡಾ. ಬಾಳಿಗಾ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರೂ ಆದ ಡಾ. ಎಲ್. ಆರ್. ಹೆಗಡೆಯವರು. ಅವರಿಗೆ ನನ್ನ ಅನಂತ ಕೃತಜ್ಞತೆಗಳು ಸಲ್ಲುತ್ತವೆ. ಇನ್ನು ಮುಖ್ಯವಾಗಿ, ಈ ವಿಷಯದ ಕುರಿತು ಅಂದು ಸವಣೂರಿನಲ್ಲಿ ನಾನು ಭಾಷಣ ಮಾಡಲು ಅವಕಾಶವಿತ್ತು, ಅದನ್ನು ಇಂದು ಪುಸ್ತಕ ರೂಪದಲ್ಲಿ ಬೆಳಕಿಗೆ ತಂದ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ಶಾಖೆಯ ನಿರ್ದೇಶಕರಾದ ಶ್ರೀ ಚೆನ್ನವೀರ ಕಣವಿಯವರಿಗೂ, ಅವರ ಸಹೋದ್ಯೋಗಿಗಳೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು. ಇದೇ ರೀತಿ ಜನಪದ ಸಾಹಿತ್ಯದ ಸಂಗ್ರಹಣೆ, ಸಂಪಾದನೆ ಹಾಗೂ ವಿಮರ್ಶೆ ಮೊದಲಾದ

ವಿಷಯಗಳಲ್ಲಿ ನನ್ನೊಡನೆ ಸಹಕರಿಸುತ್ತ ಬಂದ ಸಹೋದ್ಯೋಗಿ ಪ್ರೊ. ಬಂ. ರಂ. ಸರ್ಮೊಕದ್ದಂ ಅವರ ಉಪಕಾರವನ್ನು ನಾನು ಇಲ್ಲಿ ಸ್ಮರಿಸುತ್ತೇನೆ. ಅಲ್ಲದೆ ಬಹು ಮುಖ್ಯವಾಗಿ, ಈ ಪುಸ್ತಿಕೆಯಲ್ಲಿ ಉದಾಹರಿಸಿದ ಅನೇಕ ಕೊಂಕಣಿ ಒಗಟು ಗಳನ್ನು ಹಾಗೂ ಗೀತಗಳನ್ನು ಸಂಗ್ರಹಿಸುವಲ್ಲಿ ನೆರವಾದ ಶ್ರೀ ವಿ. ಆರ್. ಶಿಬಾಡ ಹಾಗೂ ನನ್ನ ವಿದ್ಯಾರ್ಥಿ ಶ್ರೀ ಆರ್. ಎಂ. ಶೇಟ್– ಇವರನ್ನು ಕೂಡ ನೆನೆಯದಿರಲಾರೆ.

ಕೊನೆಯದಾಗಿ, ಅಂದು ಉಪನ್ಯಾಸವನ್ನು ಕೇಳಿ, ನನಗೆ ಪ್ರೋತ್ಸಾಹ–ಉತ್ತೇಜನಗಳನ್ನಿತ್ತ ಸವಣೂರಿನ ಮಹಾಜನ ರನ್ನು ಕೂಡ ಕೃತಜ್ಞತೆಯಿಂದ ನೆನೆಯುತ್ತೇನೆ.

ಡಾ. ಬಾಳಿಗಾ ಆರ್ಟ್ಸ ಮತ್ತು
ಸಾಯನ್ಸ ಕಾಲೇಜು, ಕುಮಟಾ.
೧೨—೩—೧೯೭೩.

—ಎಲ್. ವ್ಹಿ. ಪೈ

ವಿಷಯ ಸೂಚಿ.

—[]—

೧. ಮೊದಲ ಮಾತು :

ಕನ್ನಡ ಹಾಗೂ ಕೊಂಕಣಿ ಜನಪದ ಸಾಹಿತ್ಯಗಳ ಸ್ವರೂಪ, ಲಕ್ಷಣ ಮತ್ತು ವೈಶಿಷ್ಟ್ಯಗಳನ್ನು ಅರಿಯುವ ಮೊದಲು– ಈ ಎರಡು ಭಾಷೆಗಳ ಸಾಹಿತ್ಯಗಳು ಬೆಳೆದುಬಂದ ಜನಪದ, ಅವುಗಳ ವ್ಯಾಪ್ತಿ ಹಾಗೂ ಅವುಗಳ ಇಂದಿನ ಸ್ಥಿತಿ ಗಳನ್ನು ಸಂಕ್ಷೇಪವಾಗಿಯಾದರೂ ಪರಿಚಯ ಮಾಡಿಕೊಳ್ಳು ವದು ತಪ್ಪಾಗಲಾರದು. ಕನ್ನಡ ಜನಪದ ಸಾಹಿತ್ಯವು ೯ನೆಯ ಶತಕದ "ಕವಿರಾಜಮಾರ್ಗ"ದ ಕರ್ತೃ ನೃಪತುಂಗನೆಂದಂತೆ- "ಕಾವೇರಿಯಿಂದಂ ಆ ಗೋದಾವರಿವರಮಿರ್ದ" ನಾಡಿನಲ್ಲಿ ಬೆಳೆದು ಬಂದದ್ದು. ಕನ್ನಡ ಜನಪದ, ಅದರ ಸಾಹಿತ್ಯ, ವೈಶಿಷ್ಟ್ಯಗಳ ಕುರಿತು ಈಗಾಗಲೇ ಸಾಕಷ್ಟು ಪುಸ್ತಕಗಳು ಕನ್ನಡದಲ್ಲಿ ಈಗ ಲಭ್ಯವಿರುವದರಿಂದ ಆ ವಿಷಯವನ್ನು ಇಲ್ಲಿ ಪುನಃ ಪ್ರಸ್ತಾಪಿಸಿಲ್ಲ; ಬದಲಾಗಿ, ಕನ್ನಡಿಗರಿಗೆ ಈ ತನಕ ಬಹಳ ಮಟ್ಟಿಗೆ ಪರಿಚಯವಾಗಿರದ ಕೊಂಕಣಿ ಜನಪದ, ಕೊಂಕಣಿ ಭಾಷೆ, ಕೊಂಕಣಿಗರ ಮೂಲ— ಮೊದಲಾದ ವಿಷಯುಗಳನ್ನು ತೀರ ಸಂಕ್ಷೇಪವಾಗಿ ಪರಿಚಯಮಾಡಿಕೊಡಲು ಪ್ರಯತ್ನಿಸಲಾಗಿದೆ. ಕೊಂಕಣಿ ಜನಪದ ಸಾಹಿತ್ಯವು ಉತ್ತರ ಭಾರತದ ಸರಸ್ವತೀ ನದೀ ತೀರದ ಜನಪದದಲ್ಲಿ ಬೆಳೆಯಿತು. ಅನಂತರ ಆ ಭಾಗದಲ್ಲಿ ಒದಗಿದ ಕ್ಷಾಮದ ಸಮಯದಲ್ಲಿ, ಕೊಂಕಣಿ ಭಾಷಿಕರಾದ ಆರ್ಯರು— ಉತ್ತರದಿಂದ ದಕ್ಷಿಣಕ್ಕೆ

ಸರಿಯುತ್ತ, ಮುಂದೆ ಕೊಂಕಣ ಪಟ್ಟೆಯಲ್ಲೆಲ್ಲ ಪಸರಿಸುತ್ತ— ಕೊನೆಯದಾಗಿ, ಕರಾವಳಿಯ ಗೋಮಂತಕ ಅಥವಾ ಗೋವಾಚಲ (ಇಂದಿನ ಗೋವಾ ಪ್ರಾಂತ) ದಲ್ಲಿ ಸ್ಥಿರವಾಗಿ ನೆಲೆಯೂರಿದರು. ಕೊಂಕಣಿ ಗೋವೆಯ ಪ್ರಾದೇಶಿಕ ಭಾಷೆ. ಸುಮಾರು ೬-೭ ಲಕ್ಷ ಜನಸಂಖ್ಯೆಯಿರುವ ಗೋವೆಯಲ್ಲಿ ಕೊಂಕಣಿ ಮಾತೃಭಾಷೆಯಾಡುವ ಜನಗಳು ಪ್ರತಿಶತ ೯೪ ರಷ್ಟು ಇದ್ದಾರೆಂದು ೧೯೬೧ರ ಜನಗಣತಿಯಿಂದ ಗೊತ್ತಾಗಿದೆ. ಭೌಗೋಲಿಕ, ಜಾನಾಂಗಿಕ ಹಾಗೂ ಸಾಂಸ್ಕೃತಿಕ ಪರಿಸರಗಳ ದೃಷ್ಟಿಯಿಂದ ಕೊಂಕಣಿ ಭಾಷೆಯು ದ್ರಾವಿಡ ವರ್ಗದ (ದ.ಭಾರತದ) ಭಾಷೆಯಾದ ಕನ್ನಡಕ್ಕಿಂತ ಆರ್ಯವರ್ಗದ ಇತರ ಭಾಷೆಗಳಾದ ಗುಜರಾಥಿ, ಹಿಂದಿ, ಆಸಾಮಿ, ಕಾಶ್ಮೀರಿ, ಸಿಂಧಿ, ಬಂಗಾಲಿ ಮತ್ತು ಮರಾಠಿ ಭಾಷೆಗಳೊಂದಿಗೆ — ಹೆಚ್ಚಿನ ಸಂಬಂಧ-ಸಾಮೀಪ್ಯಗಳನ್ನು ಹೊಂದಿದೆ. ಆದರೆ ಕೊಂಕಣಿ ಭಾಷಿಕರು ಗೋಮಂತಕದಲ್ಲಿ ನೆಲೆನಿಂತ ಮೇಲೆ ಸುಮಾರು ೧೫-೧೬ನೆಯ ಶತಕಗಳಲ್ಲಾದ ಪೋರ್ತುಗೀಜ ಆಳರಸರ ದೌರ್ಜನ್ಯ, ಬಲಾತ್ಕಾರದ ಮತಾಂತರ ಹಾಗೂ ಇನ್ನಿತರ ಉಗ್ರಹಿಂಸೆಗಳು— ಮೊದಲಾದ ಅಸಂಖ್ಯ ಕಾರಣಗಳಿಂದ ಕೊಂಕಣಿ ಭಾಷಿಕರು ಗೋವೆಯಿಂದ ಹತ್ತಿರದ ನೆರೆಯ ಜಿಲ್ಹೆಗಳಾದ ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡಗಳಿಗೆ ಬಂದು ನಿಂತರು. ಈ ವಲಸೆ ಅಲ್ಲಿಗೆ ನಿಲ್ಲದೆ, ತೀರ ದಕ್ಷಿಣದ ಕೇರಳ ರಾಜ್ಯಕ್ಕೂ ವ್ಯಾಪಿಸಿತು. ಅಂತೆಯೇ ಇಂದು ಕೋಚೀನದಲ್ಲಿ ಕೊಂಕಣಿ ಭಾಷೆ ರಾಜ್ಯದ ೩ನೇ ಮುಖ್ಯ ಭಾಷೆಯಾಗಿದೆ. ಈ ರೀತಿ ಕೊಂಕಣಿ ಮಾತೃ-

ಭಾಷೆಯಾಡುವವರು ಇಂದಿನ ಮಹಾರಾಷ್ಟ್ರ ರಾಜ್ಯದ ರತ್ನಾಗಿರಿ, ಗೋವಾ ಪ್ರಾಂತ, ಕರ್ನಾಟಕ ರಾಜ್ಯದ ಉತ್ತರ ಕನ್ನಡ (ಕಾರವಾರ ಜಿಲ್ಲೆ), ದ. ಕನ್ನಡ, ಕೇರಳ ರಾಜ್ಯದ ಕೋಚೀನ ಹಾಗೂ ಇನ್ನಿತರ ಪ್ರದೇಶಗಳು, ಭಾರತದ ಮುಖ್ಯ ಪಟ್ಟಣಗಳಾದ ಮುಂಬಯಿ, ಮದ್ರಾಸ, ದಿಲ್ಲಿ, ಬೆಂಗಳೂರು, ಕಲಕತ್ತಾ ಮೊದಲಾದ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಈ ರೀತಿ ಒಂದು ಮಾತೃಭಾಷೆಯಾಡುವ ಈ ಕೊಂಕಣಿ ಜನಗಳಿಗೆ ತಮ್ಮದೇ ಆದ ಒಂದು ಜನಪದ (ರಾಜ್ಯವಿದ್ದಂತೆ) ಶಾಶ್ವತವಾಗಿ ದೊರೆಯದಿದ್ದರೂ, ಕೊಂಕಣಿಗರು ಹೋದಲ್ಲೆಲ್ಲ ತಮ್ಮ ಭಾಷೆಯನ್ನು, ತಮ್ಮ ಆಚಾರ-ವಿಚಾರ-ಸಂಪ್ರದಾಯ-ಸಂಸ್ಕೃತಿಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದಾರೆಂಬುದು ಖಂಡಿತವಾಗಿಯೂ ಕೊಂಕಣಿಯ ದೃಷ್ಟಿಯಿಂದ ಸುದೈವದ ಸಂಗತಿ! ತನ್ನ ಜೀವಿತದ ಯಾವದೇ ಕಾಲದಲ್ಲಿಯೂ ರಾಜಾಶ್ರಯವಾಗಲಿ, ಇತರರ ಸಹಕಾರವಾಗಲಿ ದೊರೆಯದೆ, ತನ್ನ ಅಸ್ತಿತ್ವಕ್ಕೇನೇ ಸಂಚಕಾರ ಬಂದು, ಹೇಗೋ ಜೀವಧಾರಣೆ ಮಾಡಬೇಕಾಯಿತು ಕೊಂಕಣಿ ಭಾಷೆ. ಆದರೂ ಇಂದಿಗೂ-ಕೊಂಕಣಿ ಜನಪದದಲ್ಲಿ- ನಾಗರಿಕತೆಯ ವಿಕಾಸಕ್ಕೂ ಮೊದಲು-ಅಂದು ಪ್ರಚಲಿತವಿದ್ದ ಜನಪದ ಸಾಹಿತ್ಯವು ಮಾತ್ರ ಇಂದಿಗೂ ಈ ಭಾಷೆಯ ಜನಗಳು ಇರುವಲ್ಲೆಲ್ಲ ಬದುಕಿ ಉಳಿದಿದೆ. ಕ್ರಿ. ಶ. ೧೫-೧೬ನೆಯ ಶತಕಗಳಲ್ಲಿ- ತನ್ನ ಸ್ವಕ್ಷೇತ್ರವಾದ ಗೋವೆಯಲ್ಲೇ ಕೊಂಕಣಿಗೆ ಮರಣಾಂತಿಕ ಪೆಟ್ಟು ಬಿತ್ತು. ಇದಕ್ಕೆ ಕಾರಣ— ಅಂದಿನ ಪೋರ್ತುಗೀಜ ಆಳರಸರ ಕೊಲೆ-

ಸುಲಿಗೆ-ಲೂಟಿಗಳು. ಇಡಿಯ ಭಾರತವನ್ನೇ ಕ್ರಿಸ್ತಮಯವಾಗಿ ಮಾಡಹೊರಟ ಪೋರ್ತುಗೀಜರು ಅಂದು ಗೋವೆಯಲ್ಲಿ ಪ್ರಚಲಿತವಿದ್ದ ಕೊಂಕಣಿ ಭಾಷೆಯ ಎಲ್ಲ ಮಹತ್ವದ ಗ್ರಂಥಗಳನ್ನು ಸುಟ್ಟುಹಾಕಿದರು. ಇದಕ್ಕೆ ದಾಖಲೆಯು ಕೊಂಕಣಿ ಭಾಷೆಯ ಇತಿಹಾಸದಲ್ಲಿ ದೊರೆಯುತ್ತದೆ. ಈ ರೀತಿ ಘಟನೆ ನಡೆದದ್ದು ಕೊಂಕಣಿ ಭಾಷೆಯ ಹಾಗೂ ಕೊಂಕಣಿಗರ ದುರ್ದೈವ! ಹೀಗಿದ್ದರೂ ಕೂಡ, ಜನರ ಬಾಯಿಯಲ್ಲಿ ಪ್ರಚಾರವಾಗಿ- ಕರ್ಣಪಾರಂಪರ್ಯವಾಗಿ ಹರಿದು ಬಂದ ಜನಪದ ಸಾಹಿತ್ಯವನ್ನು ಮಾತ್ರ ಪೋರ್ತುಗೀಜರು ಸುಡ ಲಾರದೆ ಹೋದರು. ಇದು ಇದ್ದುದರಲ್ಲಿ ಸಮಾಧಾನದ ಸಂಗತಿ. ಗೋವೆಯಿಂದ ಕರ್ನಾಟಕದ ಪ್ರದೇಶಗಳಿಗೆ ವಲಸೆ ಬಂದವರಲ್ಲಿ ಸಾರಸ್ವತ ಬ್ರಾಹ್ಮಣರು ಮುಖ್ಯರು. ಇವರ ಜೊತೆಗೆ ಕೊಂಕಣ ವೈಶ್ಯರು, ಅಕ್ಕಸಾಲಿಗರು (ಸುವರ್ಣಕಾರರು ಅಥವಾ ಸೋನಾರರು), ಚಪ್ಪೇಕಾರರು, ಸುತಾರರು, ಕಸರರು, ಗುಡಿಗಾರರು, ಗುರುವರು, ಬಂಡಿಗರು, ಕುಡುಂಬಿಗಳು (ಕುಳುಂಬಿ ಜನರು), ಸುದೀರರು, ಭಂಡಾರಿ ಗಳು, ಕೊಂಕಣ ಖಾರ್ವಿಗಳು ಮತ್ತು ಕಲಾವಂತರೆಂಬವರು ಕೂಡ ಹತ್ತಿರದ ಕನ್ನಡ ಜಿಲ್ಲೆಗಳಿಗೆ ವಲಸೆ ಬಂದವರು. ಇದೇ ರೀತಿ ನವಾಯತರು, ಕಾಫಿಯತರು ಮತ್ತು ದಾರ್ಜಿ ಜನರು- ಬೊಂಬಾಯಿ, ಝುಂಜಿರಾ, ರತ್ನಾಗಿರಿ ಮತ್ತು ಉತ್ತರ ಕನ್ನಡದ ಬೆಸ್ತರು- ಇವರೆಲ್ಲ ಕೊಂಕಣಿ ಮಾತಾಡುವ ಮುಸ್ಲಿಮರು. ರತ್ನಾಗಿರಿ, ಮಲ್ವಾನ, ಸಾವಂತವಾಡಿಗಳಲ್ಲಿ ಕೊಂಕಣಿ ಭಾಷೆಯ

ಒಂದು ಉಪಭಾಷೆಯೇ ಅನೇಕ ಜನರ ಮಾತೃಭಾಷೆಯಾಗಿದೆ. ಅಲ್ಲಿಯ ಚಿತ್ತಪಾವನ ಮತ್ತು ಕರ್ಹಾಡ ಬ್ರಾಹ್ಮಣರೂ, ಹರಿಜನರೂ ಕೂಡ ಒಂದು ಕೊಂಕಣಿಯ ಪ್ರಭೇದವನ್ನೇ ಮಾತಾಡುವರು. ಈ ರೀತಿ ಕೊಂಕಣಿ ಮಾತಾಡುವ ಜನಗಳು ಒಂದು 'ಜನಪದ'ದಲ್ಲಿಯೇ ನಮಗೆ ದೊರೆಯದ್ದರಿಂದ, ಅವರಲ್ಲಿ ಅನೂಚಾನವಾಗಿ ಬೆಳೆದು ಬಂದ ಜನಪದ ಸಾಹಿತ್ಯವನ್ನು ಕಲೆ ಹಾಕುವದು ತುಂಬ ದುಸ್ತರವಾದ ಕೆಲಸವಾಗಿದೆ. ಅಲ್ಲದೆ ಇಂದು ಒಂದು ಭಾಗದ ಕೊಂಕಣಿಗರಿಗೆ ಮತ್ತೊಂದು ಭಾಗದ ಕೊಂಕಣಿಗರ ಸಂಪರ್ಕ ಬರುವದು ಕೂಡ ತೀರ ಕಠಿಣಸಾಧ್ಯವಾದ ಕೆಲಸವಾಗಿದೆ. ಇದಕ್ಕೆಲ್ಲ ತೀರ ಸ್ಪಷ್ಟವಾದ ಕಾರಣವೆಂದರೆ– ಭಾರತದ ಇತರ ಪ್ರಾಂತೀಯ ಭಾಷೆಗಳಂತೆ–ಕೊಂಕಣಿ ಮಾತಾಡುವವರೆಲ್ಲ ಒಂದು ರಾಜ್ಯದಲ್ಲಿ ರಾಜಕೀಯವಾಗಿ ಒಂದಾಗಿ ಉಳಿಯುವದು ಸಾಧ್ಯವಾಗದಿರುವದೇ ಆಗಿದೆ. ನಮ್ಮ ಪ್ರಸ್ತುತ ಪರಿಶೀಲನೆಗೆ ಈ ವಿಷಯ ಹೊರತಾದ್ದರಿಂದ ನಾವು ಅದನ್ನು ಬಿಡಬಹುದು.

ಮೇಲಿನ ಸಂಕ್ಷಿಪ್ತವಾದ ಹಿನ್ನೆಲೆಯಿಂದ ನಮಗೆ ಮುಖ್ಯವಾಗಿ ಗೊತ್ತಾಗುವ ಸಂಗತಿಗಳು : ಕೊಂಕಣಿ ಭಾಷಿಕರು ಸುಮಾರು ೧೫ನೆಯ ಶತಕದಿಂದಲೇ ಕನ್ನಡ ಪ್ರದೇಶಗಳಿಗೆ ವಲಸೆ ಬಂದರು. ಅಂದರೆ ಸುಮಾರು ೫೦೦ ವರುಷಗಳಷ್ಟು ಹಿಂದಿನಿಂದಲೂ ಕನ್ನಡನೆಲದಲ್ಲಿ ಕನ್ನಡಿಗರೊಡನೆ ಸಮರಸವಾಗಿ ಹೊಂದಿಕೊಂಡು ಬಾಳಿದರು. ಕೊಂಕಣಿ ಕನ್ನಡಿಗರಲ್ಲಿ ಕೆಲವರು ಕನ್ನಡದ ಉದ್ದಾಮ ಕವಿಗಳೂ, ಸಾಹಿತಿಗಳೂ ಆಗಿದ್ದಾರೆ ಎಂಬುದು ಇಲ್ಲಿ ಲಕ್ಷಿಸಬೇಕಾದ ಸಂಗತಿ. ದಿವಂಗತರಾದ ಪಂಜೆ

ಮಂಗೇಶರಾಯರು, ಮಂಜೇಶ್ವರ ಗೋವಿಂದ ಪೈಗಳು, ಎಮ್. ಎನ್. ಕಾಮತರು- ಇವರೇ ಮೊದಲಾದವರಲ್ಲದೆ, ಶ್ರೀಯುತರುಗಳಾದ ದಿನಕರ ದೇಸಾಯಿ, ಯಶವಂತ ಚಿತ್ತಾಲ, ಗಂಗಾಧರ ಚಿತ್ತಾಲ, ಗೌರೀಶ ಕಾಯ್ಕಿಣಿ ಡಾ. ಶಾಂತಿನಾಥ ದೇಸಾಯಿ ಮೊದಲಾದ ಪ್ರಖ್ಯಾತರನ್ನು ಹೆಸರಿಸಬಹುದು. ಕೊಂಕಣಿ-ಕನ್ನಡಗಳು ಶತಮಾನಗಳಷ್ಟು ಹಿಂದಿನಿಂದಲೇ- ಒಂದರ ಪಕ್ಕದಲ್ಲಿ ಒಂದು - ಸಮರಸವಾಗಿ ಹೊಂದಿಕೊಂಡು ಬಾಳಿದ ಭಾಷೆಗಳಾಗಿವೆ. ಈ ರೀತಿಯ ಸಹಯೋಗದಿಂದ ಒಂದು ಭಾಷೆಯ ಸಾಹಿತ್ಯದ ಪ್ರಭಾವ ಮತ್ತೊಂದರ ಮೇಲೆ ಆಗುವುದು ತೀರ ಸ್ವಾಭಾವಿಕ. ಪರಸ್ಪರ ಸಹಬಾಳ್ವೆಯಲ್ಲಿ ಕನ್ನಡದ ಕೆಲವು ಜನಪದ ಸಾಹಿತ್ಯ ಸಂಸ್ಕೃತಿಗಳ ಪ್ರಭಾವ ಕೊಂಕಣಿಯ ಮೇಲಾದದ್ದುಂಟು. ಕನ್ನಡ ಸಾಹಿತ್ಯಕ್ಕೆ ಸುಮಾರು ೧೫೦೦ ವರುಷಗಳ ಹಳಮೆಯುಂಟು. ಕನ್ನಡವು ವ್ಯಾವಹಾರಿಕವೂ, ಗ್ರಂಥಸ್ಥವೂ ಆದ ಪ್ರೌಢಭಾಷೆ. ಇಂಥ ಒಂದು ಶ್ರೀಮಂತ ಭಾಷೆಯ ಪ್ರಭಾವ ಗ್ರಂಥಸ್ಥವಾಗಿ ಇನ್ನೂ ಉನ್ನತ ಮಟ್ಟಕ್ಕೇರದ— ಕೊಂಕಣಿಯಂಥ ಭಾಷೆಯ ಮೇಲಾದರೆ ಅದು ಅಷ್ಟೊಂದು ದೊಡ್ಡ ಆಶ್ಚರ್ಯದ ಮಾತೂ ಅಲ್ಲ. ಕನ್ನಡವು ಕೂಡ ಒಂದು ಕಾಲಕ್ಕೆ ಅಂತಹ ಒಂದು ಅವಸ್ಥೆಯನ್ನು ದಾಟಿಯೇ ಇಂದಿನ ಈ ಶ್ರೀಮಂತ ಅವಸ್ಥೆಗೆ ಬಂದಿದೆ. ಇದಕ್ಕೆ ರಾಜಕೀಯ, ಸಾಮಾಜಿಕ ಹಾಗೂ ಜಾನಾಂಗಿಕಗಳಾದ ಪ್ರಬಲ ಕಾರಣಗಳೂ ಉಂಟು. ಅವೆಲ್ಲವುಗಳ ಪರಿಶೀಲನೆ ಇಲ್ಲಿ ನಮಗೆ ಅನಗತ್ಯ.

ಈ ರೀತಿ ಕೊಂಕಣಿಯು ಮೇಲೆ ಕನ್ನಡದ ಪ್ರಭಾವ ಬಿದ್ದರೂ, ಕೊಂಕಣಿ ತಾನು ತನ್ನ ಮೂಲದಿಂದ ಗಳಿಸಿ-ಕೊಂಡು ಬಂದ ಜಾನಪದ (ಜನಪದದೊಳಗಿನ ಸೊತ್ತು) ಬಹಳ ಮಟ್ಟಿಗೆ ಅಬಾಧಿತವಾಗಿಯೇ ಉಳಿದಿದೆ. ಇದೇ ರೀತಿ ಕೊಂಕಣಿಯು ಕೇಂದ್ರವಾದ ಗೋವೆಯಲ್ಲಿ ಪೋರ್ತುಗೀಜ ಭಾಷೆಯು ಮೂಲಕ ಕ್ರೈಸ್ತ ಸಂಸ್ಕೃತಿಯು ಪ್ರಭಾವವೂ ಆ ಭಾಷೆಯು ಮೇಲಾಗಿದೆ. (ಈ ಪ್ರಭಾವ ಕೊಂಕಣಿ ಭಾಷೆಯಲ್ಲಿ ಸೇರಿದ ಕೆಲವೊಂದು ಪದಗಳಲ್ಲಿರಬಹುದು.) ಅಥವಾ ಗೋವಾ ಕೊಂಕಣಿಯು ವ್ಯಾಕರಣ ಪ್ರಕ್ರಿಯೆಗಳಲ್ಲಿ –ವಿಶೇಷತಃ ಕ್ರಿಶ್ಚನ್ ಜನರ ಕೊಂಕಣಿಯಲ್ಲಿ– ಆಗಿರಬಹುದು. ಇಂದು ಗೋವೆಯಲ್ಲಿ ಕ್ರೈಸ್ತ ಮತಾನುಯಾಯಿಗಳೆಂದು ಕರೆದುಕೊಳ್ಳುವವರೆಲ್ಲರೂ— ಒಂದು ಕಾಲಕ್ಕೆ ಕೊಂಕಣಿ ಮಾತಾಡುವ ಸಾರಸ್ವತ ಹಿಂದುಗಳೋ, ಇನ್ನಿತರರೋ ಆಗಿದ್ದರು. ಆದೇ ರೀತಿ ರತ್ನಾಗಿರಿ, ಕರ್ವಾಡ ಮೊದಲಾದ ಕೊಂಕಣಪಟ್ಟೆಯ ಇತರ ಜಿಲ್ಹೆಗಳಲ್ಲಿ ಕೊಂಕಣಿಯು ಮೇಲೆ ಮರಾಠಿಯು ಪ್ರಭಾವವೂ ಆಗಿದೆ. ಅದೇ ರೀತಿ, ಮರಾಠಿ ಭಾಷೆಯು ಮೇಲೆ ಕೊಂಕಣಿಯು ಪ್ರಭಾವವೂ ಬೇಕಾದಷ್ಟಾಗಿದೆ. ಇಲ್ಲಿ ಉದಾಹರಣೆಗೆ ಮರಾಠಿ ಭಾಷೆಯ ಅತಿ ಪ್ರಾಚೀನ ಗ್ರಂಥ "ಜ್ಞಾನೇಶ್ವರಿ"ಯೊಂದೇ ಸಾಕು. ಅದೇ ರೀತಿ ಕೇರಳದಲ್ಲಿಯ ಕೊಂಕಣಿಯ ಮೇಲೆ 'ಮಲೆಯಾಳಂ' ಭಾಷೆಯು ಪ್ರಭಾವವೂ ಸ್ವಲ್ಪ ಮಟ್ಟಿಗೆ ಆಗಿರಬಹುದು. ಆದರೆ ಈ ರೀತಿಯ "ಕೊಡು-ಕೊಳ್ಳುವಿಕೆ" (Exchange) ವ್ಯವಹಾರ ಯಾವಾ

ಗಲೂ ಏಕಪಕ್ಷೀಯವಾಗಿಯೇ ನಡೆಯುವದಿಲ್ಲ. ಕೆಲವೊಮ್ಮೆ ಗ್ರಾಂಥಿಕವಾಗಿ ಅತ್ಯಂತ ಶ್ರೀಮಂತ ಭಾಷೆ ಕೂಡ— ತನ್ನ ನೆರೆಯ ಭಾಷೆಯಿಂದ ಪ್ರಭಾವಿತವಾಗುವದು ಭಾಷಾ ಸಂಸಾರ ಗಳಲ್ಲಿ ಅಸ್ವಾಭಾವಿಕವೇನೂ ಅಲ್ಲ. ಹೀಗೆ ಕೊಂಕಣಿಯಿಂದ ಕೂಡ ಕೆಲವೊಂದು ಜನಪದ ಕಥೆಗಳು, ಒಗಟುಗಳು, ಗಾದೆಗಳು ಕಾಲಾನುಕ್ರಮದಲ್ಲಿ ಕನ್ನಡ ಭಾಷೆಯಲ್ಲಿ ಸೇರಿ, ಕನ್ನಡ ಜನಪದ ಸಾಹಿತ್ಯದಲ್ಲಿ (ವಿಶೇಷತಃ ಕನ್ನಡ ಜಿಲ್ಹೆಗಳಲ್ಲಿ) ಪ್ರಚಲಿತವಾಗಿದ್ದರೂ ಆಗಿರಬಹುದು. ಮಾರ್ಗೀಯ ಅಥವಾ ಶಿಷ್ಟ ಸಾಹಿತ್ಯವು ಗ್ರಂಥಸ್ಥವಾಗಿರುವುದರಿಂದಲೂ, ಈ ರೀತಿಯ ಸಾಹಿತ್ಯದಿಂದ ಬೇರೆ ಭಾಷೆಯ ಸಾಹಿತ್ಯದಲ್ಲಿ ಸೇರಿದ ಸಾಹಿತ್ಯ ವನ್ನು ಗುರುತಿಸುವದು ಸುಲಭ ಸಾಧ್ಯವಿರುವುದರಿಂದಲೂ, ಹೇಳುವದನ್ನು ನಿರ್ದಿಷ್ಟವಾಗಿ "ಇದಮಿತ್ಥಂ" ಎಂದು ಖಂಡ ತುಂಡವಾಗಿ ಹೇಳಬಹುದು. ಆದರೆ ಜನಪದ ಸಾಹಿತ್ಯ ಬಹು ಮಟ್ಟಿಗೆ ಇನ್ನೂ ಜನರ ಬಾಯಿಮಾತುಗಳಲ್ಲಿ ಬದುಕುತ್ತಿರು ವದರಿಂದ, ಶಿಷ್ಟ ಸಾಹಿತ್ಯದಂತೆ (ಗ್ರಂಥಸ್ಥ) ಇಲ್ಲಿ ಯಾವು ದನ್ನೂ ಖಂಡಿತವಾಗಿ ಹೇಳಲಿಕ್ಕೆ ಬರುವದಿಲ್ಲ.

ಯಾವುದೇ ಭಾಷೆಯ ಜನಪದ ಸಾಹಿತ್ಯದಲ್ಲಿ ಜನಪದ ಗೀತಗಳು, ಕಥೆಗಳು, ಒಗಟುಗಳು ಮತ್ತು ಗಾದೆಗಳು ಬಹು ಮುಖ್ಯವಾದ ಪ್ರಕಾರಗಳು. ಇವುಗಳಲ್ಲಿ ಜನಪದ ಗೀತಗಳು ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಹೋಗುವದು ತೀರ ಅಪರೂಪ. ಇದಕ್ಕೆ ಕಾವ್ಯವು ಸಾಹಿತ್ಯದ ತೀರ ಕಠಿಣ ಪ್ರಕಾರವೆಂಬ ಕಾರಣವೂ ಅಲ್ಲದೆ, ಮೂಲದಿಂದ ಮಾಡಿದ

ಭಾಷಾಂತರವು ಬಹುತರವಾಗಿ ಅಷ್ಟೇ ಸೊಗಸಾಗಿ ರುಚಿಸು ವುದು ಬಹಳ ಕಷ್ಟವೆಂಬುದೂ ಇರಬೇಕು. ಈ ದೃಷ್ಟಿಯಿಂದ ಕನ್ನಡ-ಕೊಂಕಣಿಗಳು ಶತಮಾನಗಳಿಂದ ಒಂದರ ಪಕ್ಕದಲ್ಲಿ ಒಂದು— ನಿಕಟವಾಗಿ ಬಾಳಿದ ಭಾಷೆಗಳಾದ್ದರಿಂದ, ಕನ್ನಡದ ಹಲವಾರು ಜನಪದ ಕಥೆಗಳು, ಒಗಟುಗಳು ಹಾಗೂ ಗಾದೆ ಗಳು ಕೊಂಕಣಿಯಲ್ಲಿ ಬಂದು ಸೇರಲು ಸಾಧ್ಯವಿದೆ. ಇಂಥ ವೇಳೆಯಲ್ಲಿ ಕೊಂಕಣಿ ಮೂಲವುಳ್ಳ ಕಥೆಗಳನ್ನು, ಒಗಟು ಗಳನ್ನು ಮತ್ತು ಗಾದೆಗಳನ್ನು— ಕೊಂಕಣಿ ಜಾನಾಂಗಿಕ ಸಂಸ್ಕೃತಿಯ ಹಿನ್ನೆಲೆಯಲ್ಲಿ ಪರಿಶೀಲಿಸಿ ಹೇಳಬೇಕಾಗುತ್ತದೆ. ಮತ್ತೊಂದು ವಿಷಯ: ಮುಂದಿನ ಪರಿಶೀಲನೆಯಲ್ಲಿ ಕೊಂಕಣಿ-ಕನ್ನಡ ಜನಪದ ಸಾಹಿತ್ಯಗಳಲ್ಲಿಯ ಈ ನಾಲ್ಕು ಪ್ರಕಾರಗಳ ಸಾಹಿತ್ಯದಲ್ಲಿ ಅತಿ ಹತ್ತಿರದ ಸಾಮ್ಯವುಳ್ಳ ಉದಾಹರಣೆಗಳನ್ನು ಪರಿಶೀಲಿಸಲು ಯತ್ನಿಸಲಾಗಿದೆ. ಕನ್ನಡದಲ್ಲಾದರೋ– ಕನ್ನಡ ಜನಪದದೊಳಗಿನ ಎಲ್ಲ ಭಾಗಗಳ ಜನಪದ ಸಾಹಿತ್ಯ ತುಲನೆಗೆ ದೊರೆಯುತ್ತದೆ. ಆದರೆ ಕೊಂಕಣಿಯಲ್ಲಿ—ಕನ್ನಡದಲ್ಲಿ ನಡೆ ದಂತೆ ಜನಪದ ಸಾಹಿತ್ಯದ ಸಂಗ್ರಹ ಕಾರ್ಯ ನಡೆದದ್ದು ತೀರ ಕಡಿಮೆ. ಇನ್ನು ಅದರ ಸಂಪಾದನೆ ಹಾಗೂ ವಿಮರ್ಶೆಗಳ ಮಾತು ಬಹಳ ದೂರ ಉಳಿಯಿತು. ನನ್ನ ಈ ಪರಿಶೀಲನೆ ಯಲ್ಲಿ ನಾನು ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಸೀಮಿತ ಪರಿಸರದಲ್ಲಿ ಸಂಗ್ರಹಿಸಿದ ಜನಪದ ಸಾಹಿತ್ಯವನ್ನು ಅವಲಂಬಿಸಿದ್ದೇನೆ. ಕಾರಣ ಕೊಂಕಣಿ ಜನಪದ ಸಾಹಿತ್ಯವು ಇದಿಷ್ಟೇ ಎಂದು ಯಾರೂ ತಿಳಿಯಬಾರದು. ನಮ್ಮ ಮುಂದಿನ

ಉದಾಹರಣೆಗಳಲ್ಲಿ ಈ ಜನಪದ ಸಾಹಿತ್ಯ ಮತ್ತು ಕರಾವಳಿಯ ಕನ್ನಡ ಜನಪದ ಸಾಹಿತ್ಯ ಪರಸ್ಪರ ಹೇಗೆ ಪ್ರಭಾವಿತವಾಗಿವೆ ಯೆಂಬುದನ್ನು ನೋಡೋಣ. ಅಚ್ಚ ಕೊಂಕಣಿ ಸಂಸ್ಕೃತಿಯ ಮೂಲವುಳ್ಳ ಸಾಹಿತ್ಯವನ್ನು ನಾವು ನೋಡುವುದಾದರೆ ಗೋವೆಯ ಜನಪದ ಸಾಹಿತ್ಯವನ್ನೇ ಓದಬೇಕು. ಇಲ್ಲಿಯೂ ಪೋರ್ತುಗೀಜ ಸಂಸ್ಕೃತಿಯ ಪ್ರಭಾವ ಕೊಂಕಣಿ ಸಾಹಿತ್ಯ-ಸಂಸ್ಕೃತಿಗಳ ಮೇಲಾದರೂ, ಇಲ್ಲಿಯಷ್ಟು ಅದು ಬದಲಾದಂತೆ ತೋರುವುದಿಲ್ಲ.

ಜನಪದ ಸಾಹಿತ್ಯದ ಸಂಗ್ರಹ, ಸಂಪಾದನೆ ಹಾಗೂ ವಿಮರ್ಶೆ ಇತ್ಯಾದಿಗಳು ಒಂದು ನಿಟ್ಟಿನ ಅಭ್ಯಾಸ. ಇಂದು ಯಾವುದೇ ಭಾಷೆ ಕೇವಲ ತನ್ನ ಸಾಹಿತ್ಯದ ಅಭ್ಯಾಸದಲ್ಲೇ ತೊಡಗಿ ಉಳಿದ ಭಾಷೆಗಳ ಸಾಹಿತ್ಯದ ಅಭ್ಯಾಸವನ್ನು ನಿರ್ಲಕ್ಷಿ ಸುವಂತಿಲ್ಲ. ಇಂಥಲ್ಲಿ ಮತ್ತೊಂದು ನಿಟ್ಟಿನ ಅಭ್ಯಾಸ— "ತೌಲನಿಕ ಅಧ್ಯಯನ" ಕೂಡ ಜೊತೆ-ಜೊತೆಗೆ ನಡೆಯು ವುದು ಅವಶ್ಯವಾಗುತ್ತದೆ. ವಿಶ್ವಜನಪದ ಸಾಹಿತ್ಯದಲ್ಲಿ ದೊರೆ ಯುವ "ಸಿಂಡ್ರೆಲಾ"ಳ ಕಥೆಯ ಸಾವಿರಾರು ಪಾಠಾಂತರಗಳು ದೊರೆತಿವೆಯೆಂದು ಹೇಳಲಾಗುತ್ತದೆ. ಒಂದೇ ವಸ್ತುವಿನ ಮೂಲವುಳ್ಳ ಈ ಕಥೆಯನ್ನು ಜಗತ್ತಿನ ವಿವಿಧ ಭಾಗಗಳ ಜನರು ತಮ್ಮ ಜಾನಾಂಗಿಕ, ಭೌಗೋಲಿಕ, ರಾಜಕೀಯ, ಧಾರ್ಮಿಕ ಹಾಗೂ ಇನ್ನಿತರ ಕಾರಣಗಳಿಗನುಸಾರವಾಗಿ ಹೇಗೆ ಭಿನ್ನ ಭಿನ್ನ ಆಶಯಗಳಿಗೆ ಹೊಂದುವಂತೆ ಮಾರ್ಪಡಿಸಿಕೊಂಡಿ ದ್ದಾರೆಂಬುದನ್ನು— ಆ ಕಥೆಯ ವಿವಿಧ ದೇಶಗಳ ಪಾಠಾಂತರ

ಗಳ ಅಭ್ಯಾಸದಿಂದ ತಿಳಿಯಬಹುದು. ಇದೇ ರೀತಿ ಇತರ ಕಥೆಗಳು ಕೂಡ ಭಿನ್ನ ಭಿನ್ನ ಭಾಷೆಗಳಲ್ಲಿ ಬೇರೆ ಬೇರೆ ಮಾರ್ಪಾಡುಗಳನ್ನು ಹೊಂದುತ್ತವೆ. ಇದೇ ರೀತಿಯ ಮಾರ್ಪಾಡುಗಳನ್ನು, ಆಶಯಗಳಲ್ಲಿನ ವ್ಯತ್ಯಾಸಗಳನ್ನು ಇನ್ನಿತರ ಪ್ರಕಾರಗಳಲ್ಲಿ ಕೂಡ ಕಾಣಬಹುದಾಗಿದೆ.

೨. ಕನ್ನಡ-ಕೊಂಕಣಿ ಜನಪದ ಕಥೆಗಳು

ಈಗ ನಾವು ಜನಪದ ಸಾಹಿತ್ಯದಲ್ಲಿನ ಅತಿ ಮುಖ್ಯ ಪ್ರಕಾರಗಳಲ್ಲಿ ಒಂದಾದ ಜನಪದ ಕಥೆಗಳನ್ನು ನೋಡಬಹುದು. ಕೊಂಕಣಿಯಲ್ಲಿ ಜನಪದ ಕಥೆಗಳನ್ನು "ಕಾಣೀ" (ಹಿಂದಿ-ಕಹಾನೀ) ಎಂದು ಕರೆಯುತ್ತಾರೆ. ಕುಮಟಾ ತಾಲೂಕಿನ ಕೆಕ್ಕಾರ ಗ್ರಾಮದ ಶ್ರೀಮತಿ ಗಂಗಾ ಕೋಂ ವಿನಾಯಕ ರೇವಣಕರ ಎಂಬವಳು ನನಗೆ ನಿರೂಪಿಸಿದ " ಜಾನಕಿ ಬಾಳs " (ಜಾನಕಿ ಬಾಳಾಲಿ ಕಾಣಿ) ವನ್ನು ನೋಡೋಣ.

ಒಂದು ಊರಿನಲ್ಲಿ ಒಬ್ಬ ಸದ್ಗೃಹಸ್ಥ. ಅವನಿಗೆ ನಾಲ್ಕು ಮಂದಿ ಗಂಡುಮಕ್ಕಳು, ಒಬ್ಬಳು ಮಗಳು. ಅವಳ ಹೆಸರೇ "ಜಾನಕಿ ಬಾಳs". ಗಂಡುಮಕ್ಕಳಲ್ಲಿ ಹಿರಿಯರಿಬ್ಬರ ಮದುವೆಯಾಗಿತ್ತು. ಆದರೆ ಜಾನಕಿ ಬಾಳsಳ ಮೂರನೆಯ ಸಹೋದರನ ಮದುವೆ ಇನ್ನೂ ಆಗಿದ್ದಿಲ್ಲ. ನಾಲ್ಕನೆಯ ಸಹೋದರ, ಅವಳ ಕಿರಿಯ ತಮ್ಮ. ಈ ಸಹೋದರರು ಪ್ರತಿದಿನ ಸ್ನಾನಕ್ಕೆ ಹೋಗುವದು ರೂಢಿ. ಒಂದು ದಿನ ಮೂರನೆಯ ಸಹೋದರನಿಗೆ ಸ್ನಾನ ಮಾಡುವಾಗ ಹೊಳೆಯಲ್ಲಿ ಒಂದೆರಡು ಬಂಗಾರದ ಕೂದಲು ದೊರೆಯುತ್ತವೆ. ಸರಿ, ಈ ಬಂಗಾರದ ಕೂದಲಿನ ಹೆಣ್ಣನ್ನೇ ತಾನು ವಿವಾಹವಾಗುವುದಾಗಿ ನಿರ್ಧರಿಸುತ್ತಾನೆ; ಶಪಥ ಕೂಡ ಮಾಡುವನು. ಇದು "ಜಾನಕಿ ಬಾಳs"ಳಿಗೆ ಗೊತ್ತಿಲ್ಲ. ವಿವಾಹದ ಸಿದ್ಧತೆ ಮಾಡಿ, ತಾಯಿ ಮಗಳನ್ನು

ಕರೆಯ ಹೋದರೆ, ಅವಳು ನಾಪತ್ತೆ! ಅವಳು ಗುಡ್ಡದ ಮೇಲಿನ ಮರವನ್ನು ಏರಿ ಕುಳಿತಳು. ತಾಯಿ ಬಂದು ಕೇಳಿದಳು: "ಜಾನಕೀ ಬಾಳs, ಮದುವೆ ಸಿದ್ಧತೆಯಾಗಿದೆ; ಇಳಿ ಕೆಳಗೆ". ಮಗಳು ಹೇಳುತ್ತಾಳೆ, "ತಾಯಿ ಇದ್ದವಳು ಅತ್ತೆಯಾಗುವಳು; ನಾನೊಪ್ಪುವುದಿಲ್ಲ". ಇದೇ ರೀತಿ, 'ತಂದೆ ಮಾವನಾಗುತ್ತಾನೆ, ಅಣ್ಣನು ಪರಪುರುಷನಾಗುತ್ತಾನೆ—' ಎಂದು ಹೇಳಿ ತಪ್ಪಿಸಿ ಕೊಳ್ಳುವಳು. ಕೊನೆಗೆ ಚಂದ್ರನು ನೂಲಿನೇಣಿಯನ್ನು ಕಳಿಸು ವನು, ಚಂದ್ರನೊಡನೆ ವಿವಾಹವಾಗುತ್ತದೆ, ಸುಖ ಸಂಸಾರ. ಅನಂತರ ಜಾನಕಿ ಬಾಳsಳು ತೌರಿಗೆ ಬಂದು, ಯಾರಿಗೂ ಗೊತ್ತಾಗದಂತೆ, ಕೊಟ್ಟೀಕಾರ್ತಿ ಹೆಂಗಸಿನ ವೇಷದಲ್ಲಿದ್ದು ಕೊಂಡು, ತೌರಿನವರು ಕೊಟ್ಟ ತಂಗಳನ್ನವನ್ನು ಉಣ್ಣುವಳು. ಅನಂತರ ತಂದೆ–ತಾಯಿ–ಅಣ್ಣ ಇವರಿಗೆಲ್ಲ ಉಚಿತ ಕಾಣಿಕೆ ಗಳನ್ನು ಇಟ್ಟುಹೋಗುವಳು. ಆದರೆ ಮದುವೆಯಾಗುವೆನೆಂದು ಹೇಳಿದ ಸಹೋದರನ ಹಾಸಿಗೆಯ ಪಕ್ಕದಲ್ಲಿ "ಮಸಿಕೆಂಡ" ಗಳನ್ನು ಇಡುವಳು. ಇದು ದೇವ-ಮಾನುಷ ಮೈತ್ರಿ-ಸಂಬಂಧ ಗಳನ್ನು ಧ್ವನಿಸುವ ಕಥೆಯಾಗಿದೆ. ಜಾನಕಿ–ಬಾಳsಳು ತಂದೆ– ತಾಯಿ–ಅಣ್ಣಂದಿರಿಗೆ ಕೊಡುವ ಉತ್ತರವು ಕೂಡ ಪದ್ಯರೂಪ ದಲ್ಲಿದೆ. ಇದರಿಂದ ಈ ಕಥೆ ಕೊಂಕಣಿ ಮೂಲವುಳ್ಳ ವಿಶಿಷ್ಟ ಕಥೆಯಾಗಿದೆ.

ಇದೇ ಕಥೆ ಡಾ. ಎಲ್. ಆರ್. ಹೆಗಡೆಯವರ ಜನಪದ ಕಥೆಗಳ ಸಂಗ್ರಹದಲ್ಲಿದ್ದು, ಈಗಾಗಲೇ "ಬಿಂಬಾಲಿಯ ಕಥೆ" ಯೆಂದು 'ಕರ್ಮವೀರ'ದಲ್ಲಿ ಪ್ರಕಟವಾಗಿದೆ. ಎರಡೂ ಕಥೆ ಗಳಲ್ಲಿನ ಮುಖ್ಯ ವ್ಯತ್ಯಾಸವೆಂದರೆ; ಕೊಂಕಣಿಯಲ್ಲಿ ಚಂದ್ರನು

ನೂಲಿನೇಣಿ ಕಳಿಸಿದರೆ, ಕನ್ನಡ ಕಥೆಯಲ್ಲಿ ಸೂರ್ಯನು ನೂಲಿನೇಣಿ ಕಳಿಸುತ್ತಾನೆ. ಬಿಂಬಾಲಿಯು ತನಗೆ ಮಗ ಹುಟ್ಟಿರುವನೆಂದು ತಂದೆ-ತಾಯಿಗಳಿಗೆ ತಿಳಿಯಲೆಂದು ತನ್ನ ಮಗನ "ಗಿಲ್ ಗಿಲ್ ಗೆಜ್ಜೆ"ಗಳನ್ನು ತವರುಮನೆಯಲ್ಲಿ ಬಿಟ್ಟು ತೆರಳುತ್ತಾಳೆ. ಕಥೆಯ ವರ್ಗ, ಆಶಯಗಳ ದೃಷ್ಟಿಯಿಂದ ಎರಡರಲ್ಲೂ ತೀರ ಹತ್ತಿರದ ಸಾಮ್ಯವಿದೆ. ಆದರೂ ಈ ಕಥೆ ಕೊಂಕಣಿಯಿಂದ ಕನ್ನಡಕ್ಕೆ ಹೋಯಿತೆಂದಾಗಲಿ, ಕನ್ನಡದಿಂದ ಕೊಂಕಣಿಗೆ ಹೋಯಿತೆಂದಾಗಲಿ ಹೇಳುವುದು ಸರಿಯಲ್ಲ. ಯಾಕಂದರೆ, ಈ ಎರಡೂ ಕಥೆಗಳನ್ನು ಕನ್ನಡ-ಕೊಂಕಣಿಗಳು ಎರಡು ವಿಭಿನ್ನ ಭಾಷೆಗಳಿಂದ (ಈ ಕಥೆಯ ಮೂಲ ಒಂದೇ ಇದ್ದರೂ) ಆಯ್ದುಕೊಳ್ಳುವ ಸಾಧ್ಯತೆಗಳಿಲ್ಲದೆ ಇಲ್ಲ.

ಇನ್ನೊಂದು ಕಥೆ; ಜ್ಯೋತಿಷಿ ಅಳಿಯ. ಜ್ಯೋತಿಷ್ಯ ಶಾಸ್ತ್ರದಲ್ಲಿ ನಂಬಿಕೆಯಿದ್ದ ಆ ಕಾಲದಲ್ಲಿ (ಈಗಲೂ ಕೆಲವರಲ್ಲಿದ್ದಂತೆ) ಈ ಕಥೆ ಕೊಂಕಣಿ ಜನಗಳಲ್ಲಿ ತುಂಬ ಜನಪ್ರಿಯವಾಗಿರಬೇಕು. ನವವಿವಾಹಿತ ವಧುವಿನೊಡನೆ ಅಳಿಯ ಮಾವನ ಮನೆಗೆ ಬರುತ್ತಾನೆ. ಅಳಿಯನ ಉಪಚಾರಕ್ಕಾಗಿ ಅತ್ತೆ ಒಂಭತ್ತು ದೋಸೆಗಳನ್ನು ಮಾಡಿದಳು. ಮಾಳಿಗೆಯ ಮೇಲೆ ಕುಳಿತಿರುವ ಅಳಿಯ ಇದನ್ನು ಮೊದಲೇ ಕಂಡಿದ್ದನು; ಎಣಿಸಿದ್ದನು ಕೂಡ. ಅತ್ತೆ ಧಾರಾಳವಾಗಿ ಅಳಿಯನಿಗೆ ಮೂರು ದೋಸೆಗಳನ್ನು ಮುಂಜಾನೆಯ ಉಪಹಾರಕ್ಕಾಗಿ ಬಡಿಸುತ್ತಾಳೆ. ಅಳಿಯ, "ತನಗೆ ಮೂರು ದೋಸೆ ಬೇಡ; ಮಾಡಿದ್ದೇ ಒಂಭತ್ತು ತನಗೆ ಎರಡೇ ಸಾಕು" ಎನ್ನುತ್ತಾನೆ. ಅತ್ತೆ ತನ್ನ ಅಳಿಯ

ಪ್ರಸಿದ್ಧ ಜ್ಯೋತಿಷಿಯಾಗಿರುವುದರಿಂದಲೇ ತಾನು ಒಂಭತ್ತು ದೋಸೆ ಮಾಡಿದ್ದು ಅವನಿಗೆ ಗೊತ್ತಾಯಿತೆಂದು ತಿಳಿದು, ತನ್ನ ಅಳಿಯ ದೊಡ್ಡ ಜ್ಯೋತಿಷಿಯೆಂದು ಪ್ರಚಾರ ಮಾಡಿ ಹೆಮ್ಮೆ ಪಡುವಳು. ಸರಿ; ಮೊದಲು ಅಗಸನ ಕತ್ತೆಯ ಶಕುನ ಹೇಳಿ ಕಾಲು ಧಾವತಿ, ಕತ್ತೆ ಸಿಕ್ಕಿತು, ಅನಂತರ ರೈತನ ಹೊಲದಲ್ಲಿ ನೀರು ತುಂಬಿಸುವುದು, ಪರಿಣಾಮವಾಗಿ ಹೆಗಲು ನೋವು. ಈ ಜ್ಯೋತಿಷ್ಯದ ಪ್ರಭಾವ ಆ ಪ್ರದೇಶದ ರಾಜನ ವರೆಗೆ ಪ್ರಚಾರ. ಭತ್ತದ ಹೊಲಗಳಲ್ಲಿ ತೆನೆಗಳ ಮೇಲೆ ಕುಳಿತ ತೋಳಂಭಟ್ಟ (ಮಿಡತೆ) ವೊಂದನ್ನು ಮುಷ್ಟಿಯಲ್ಲಿ ಹಿಡಿದು ಅರಸನು ಈ ಜ್ಯೋತಿಷಿ ಅಳಿಯನನ್ನು ಕೇಳುತ್ತಾನೆ. "ಈ ಮುಷ್ಟಿಯಲ್ಲಿ ಏನಿದೆ? ಹೇಳಿದರೆ ಅರ್ಧ ರಾಜ್ಯ; ಇಲ್ಲದಿದ್ದರೆ ನಿನ್ನ ತಲೆದಂಡ" ಇದು ಕಟ್ಟಪ್ಪಣೆ. ಅಳಿಯನಿಗೆ ಪೇಚು. ಯೋಚಿಸಿ ಯೋಚಿಸಿ ಹೇಳಿದ ಅಳಿಯ: "ಕತ್ತೆ ಶಕುನ ಕಾಲ ಧಾವತಿ, ಮಳೆ ಶಕುನ ಹೆಗಲು ನೋವು, ನಡುವೆ ಸಿಕ್ಕಿದ ತೋಳಂಭಟ್ಟ" ಇದು ಅಳಿಯನು ಪಟ್ಟ ಪಾಡು, ಆದರೆ ಅರಸನಿಗೆ ಬೇಕಾದ ಸರಿಯಾದ ಉತ್ತರ. (ಮಿಡತೆಯೆಂಬುದೇ ಆ ಉತ್ತರ). ಇದು ಆಕಸ್ಮಿಕ ವಾಗಿ ಬಂದದ್ದು. ಮಾತಿನಂತೆ ಅರಸನು ಅಳಿಯ ಜ್ಯೋತಿಷಿಗೆ ಅರ್ಧರಾಜ್ಯ ಕೊಟ್ಟುಬಿಡುವನು. ಅಳಿಯನು ಕಥೆಯ ಕೊನೆಯಲ್ಲಿ ಕೊಡುವ ಉತ್ತರದ ಧಾಟಿ (ಅರಸನಿಗೆ) ಯನ್ನು ಪರಿಶೀಲಿಸಿದರೆ, ಈ ಕಥೆ ಖಂಡಿತವಾಗಿಯೂ ಕನ್ನಡದಿಂದ ಕೊಂಕಣಿಗೆ ಬಂದಿದೆಯೆಂದು ಹೇಳಬಹುದು.

ಇನ್ನೊಂದು ಕಥೆ "ಏಡಿರಾಜಪುತ್ರ"ನ ಕುರಿತು. ರಾಜ ದಂಪತಿಗಳಿಗೆ ಬಹುಕಾಲದ ತಪಸ್ಸಿನಿಂದ ಹುಟ್ಟುವದೊಂದು ಏಡಿ. ಅದಕ್ಕೆ ಮನುಷ್ಯರದೇ ಆಹಾರ ಬೇಕು- ಪ್ರತಿದಿನ. ಆದರೆ ಪ್ರತಿದಿನ ಅದು ಹೇಗೆ ದೊರೆತೀತು? ಒಮ್ಮೆ ಸದ್ಗೃಹಸ್ಥ ನೊಬ್ಬನ ಹಿರಿಯ ಹೆಂಡತಿಯ ಮಗಳನ್ನು ಆಕೆಯ ಮಲತಾಯಿ ಏಡಿರಾಜ ಪುತ್ರನಿಗೆ ಆಹಾರದ ಬಲಿಯಾಗಿ ಕಳಿಸುತ್ತಾಳೆ. ಆದರೆ ಶಿವ-ಶಿವೆಯರಿಂದ ಅನುಗ್ರಹಿತಳಾದ ಆ ಮಗಳು ಏಡಿಯ ಚಿಪ್ಪಿನ ಮೇಲೆ ಕಲ್ಲೊಂದನ್ನು ಒಗೆಯಲು ಏಡಿ ಷೋಡಶ ವರ್ಷಪ್ರಾಯದ ರಾಜಪುತ್ರನಾಗಿ ಪರಿವರ್ತಿತವಾಗು ತ್ತದೆ. ರಾಜ-ರಾಣಿಯರಿಗೆ ತುಂಬ ಸಂತೋಷ. ಅವರ ವಿವಾಹದ ಸಡಗರ. ಕಾಲಕ್ರಮೇಣ ತವರಿನವರು ಗರ್ಭಿಣಿಯಾದ ಮಗಳನ್ನು ತವರಿಗೆ ಕರೆತರುವರು. ಪ್ರಸೂತಳಾದ ಹನ್ನೆರಡ ನೆಯ ದಿನ ರಾತ್ರಿ ಅರಗಿನ ಮಣೆಯ ಮೇಲೆ ಕೂಡ್ರಿಸಿ ಪಾತಾ ಳಕ್ಕೆ ದಬ್ಬುತ್ತಾಳೆ ಮಲತಾಯಿ- ಮಲಮಗಳನ್ನು. ಒಕ್ಕಣ್ಣ ಳಾದ ತನ್ನ ಮಗಳನ್ನು ರಾಜಕುಮಾರನಲ್ಲಿಗೆ ಅರಮನೆಗೆ ಕಳಿ ಸುತ್ತಾಳೆ. ರಾಜಪುತ್ರ ಅವಳನ್ನು ಸ್ವೀಕರಿಸುವುದಿಲ್ಲ. ಇತ್ತ ಪಾತಾಳಕ್ಕೆ ಹೋದ ರಾಜಪುತ್ರನ ಪತ್ನಿ ಆದಿಶೇಷನನ್ನು ಓಲೈಸಿ, ಗಿಳಿಯು ಮಾಡಿದ ಸುರಂಗ ಮಾರ್ಗದ ಸಹಾಯದಿಂದ ರಾಜ ಪುತ್ರನಿರುವ ಅರಮನೆಯನ್ನು ಸೇರುತ್ತಾಳೆ, ಅಲ್ಲಿ ಅವರ ಪುನ- ರ್ಮಿಲನ. ಮಲತಾಯಿಗೂ, ಅವಳ ಮಗಳಿಗೂ ಕಠಿಣ ಶಿಕ್ಷೆ ದೊರೆಯುತ್ತದೆ- ಅರಸನಿಂದ.

ಇದೇ ಕಥೆ ಸ್ವಲ್ಪ ವ್ಯತ್ಯಾಸಗಳೊಡನೆ ವೆರಿಯರ್ ಎಲ್ವಿನ್‌ರ "Folktales of Mahakosal"- ಎಂಬ

ಪುಸ್ತಕದಲ್ಲಿ "The Crab Prince" ಎಂದು ಇಂಗ್ಲೀಷಿಗೆ ಭಾಷಾಂತರವಾಗಿದೆ. ಉತ್ತರ ಭಾರತದ ಗುಡ್ಡಗಾಡಿನ ಜನರಾದ ಗೊಂಡರು, ಬೈಗಾಗಳು ಇಂಥ ಸಾವಿರಾರು ಕಥೆಗಳನ್ನು ತಮ್ಮ ಭೌಗೋಲಿಕ ಹಾಗೂ ಜಾನಾಂಗಿಕ ಪರಿಸರಗಳಿಗನುಗುಣವಾಗಿ ಪರಿವರ್ತಿಸಿಕೊಂಡಿದ್ದಾರೆ. ಈ ಎರಡು ಕಥೆಗಳಲ್ಲಿನ ವ್ಯತ್ಯಾಸವೆಂದರೆ– ಈ ಕಥೆಯಲ್ಲಿ ರಾಜಕುಮಾರನು ಏಡಿಯ ಕವಚವನ್ನು ಧರಿಸಿರುತ್ತಾನೆ. ಅವನು ಒಕ್ಕಲಿಗರ ಮನೆಯಲ್ಲಿದ್ದು, ಎಲ್ಲ ಜೀತದಾಳುಗಳಂತೆ ಹೊಲಕ್ಕೆ ಹೋಗಿ, ರಾಜಕುಮಾರಿಯ ಹೊಲದಲ್ಲಿ ದುಡಿಯುತ್ತಾನೆ. ಆದರೆ ತನ್ನ ನಿಜರೂಪ ಯಾರಿಗೂ ಕಾಣದಂತೆ ಏಡಿಯ ಕವಚ ಧರಿಸಿರುತ್ತಾನೆ. ಹೊಲದಲ್ಲಿ ಏಡಿಯ ಕವಚ ತೆಗೆದಿಟ್ಟು ದುಡಿಯುತ್ತಾನೆ. ಎಲ್ಲರಿಗೂ ಅಂಬಲಿ ಬಡಿಸಬಂದ ರಾಜಕುಮಾರಿ ಏಡಿಗೂ ಕೊಡುವಳು; ನಂತರ ರಾಜಕುಮಾರಿ ಏಡಿಯನ್ನೇ ಹಟಹಿಡಿದು ವಿವಾಹವಾಗುವಳು. ರಾಜನ ಲಾಯದೊಳಗಿನ ಕುದುರೆಗಳನ್ನು ಈ ಏಡಿರೂಪದ ರಾಜಕುಮಾರ ಸವಾರಿ ಮಾಡುವುದನ್ನು ರಾಜನು ಅಡಗಿ ನಿಂತು ನೋಡುತ್ತಾನೆ. ಮಗಳಿಗೆ ಆ ಕವಚವನ್ನು ಸುಟ್ಟುಹಾಕಲು ಹೇಳುವನು. ಅವಳು ಹಾಗೆಯೇ ಮಾಡುವಳು. ಆನಂತರ ಅವರೀರ್ವರೂ ಸುಖಸಂಸಾರ ಸಾಗಿಸುವರು. ನದೀ ತೀರದಲ್ಲಿ ವಾಸಿಸಿದ ಮಾನವನು ತನ್ನ ಅವಶ್ಯಕತೆಗಳಿಗೆ ತಕ್ಕಂತೆ ಈ ಕಥೆಯಲ್ಲಿನ ಆಶಯಗಳನ್ನು ಮಾರ್ಪಾಡುಗೊಳಿಸಿಕೊಂಡಿರುವುದನ್ನು ಕೊಂಕಣಿಯಲ್ಲಿ ದೊರೆತ "ಕುಲ್ಯಾರ್ಲಿ ಕಾಣಿ" (ಏಡಿರಾಜಪುತ್ರನ ಕಥೆ) ಯಲ್ಲಿ ಕಾಣಬಹುದು.

ಕೊಂಕಣಿ ಭಾಷಿಕರು ಸರಸ್ವತೀ ತೀರದಿಂದ ಕೊಂಕಣ ಪಟ್ಟಿಯಲ್ಲಿ ಪಸರಿಸುತ್ತ, ಗೋಮಂತಕಕ್ಕೆ ಬಂದ ವಿಚಾರವನ್ನು ಮನದಂದರೆ, ಈ ಕಥೆ ಕೊಂಕಣಿ ಮೂಲದ್ದೇ ಆಗಿರಬೇಕೆಂದು ತೋರುತ್ತದೆ.

ಇಲ್ಲಿ ಉದಾಹರಿಸುವ ನಾಲ್ಕನೆಯ ಕಥೆ ಕೊಂಕಣಿ ಕೇಂದ್ರವಾದ ಗೋಮಂತಕದಿಂದ ಪ್ರವಾಸಮಾಡಿ, ಕೊಂಕಣಿ ಮಾತಾಡುವವರಿದ್ದಲ್ಲೆಲ್ಲ ಪ್ರಚಲಿತವಿದೆ. ಅದರ ಹೆಸರೇ "ಕುಂಡ್ಯಾ ಕುರ್‌ಕುಳಾಲಿ ಕಾಣೀ". ಏಳು ಮಂದಿ ಹೆಣ್ಣುಮಕ್ಕಳನ್ನು ಪಡೆದ ಬಡ ಪುರೋಹಿತ ಭಟ್ಟನ ಕುಟುಂಬದ ಇತಿವೃತ್ತ ಈ ಕಥೆಗೆ ಹಿನ್ನೆಲೆಯಾಗಿದೆ. ಪೌರೋಹಿತ್ಯದ ಬಡ ಸಂಸಾರದಲ್ಲಿ ಈ ಹೆಣ್ಣುಮಕ್ಕಳ ತಾಯಿ ದೋಸೆಗಳನ್ನು ಮಾಡಿದಾಗ, ಒಬ್ಬೊಬ್ಬರೇ ಹೆಣ್ಣುಮಕ್ಕಳು ದೋಸೆಗಳನ್ನು ಕೇಳುವರು. ಪತ್ನಿಯು ದೋಸೆ ಕಡಿಮೆ ಬೀಳಬಹುದೆಂದು- ದೋಸೆಗೆ ಬೇರೆ ಹಿಟ್ಟಲ್ಲದೆ, ಮರದ ಹಿಟ್ಟಿನ ಪುಡಿಯನ್ನು ಹಿಟ್ಟಿನಲ್ಲಿ ಕಲಸಿ, ಹೆಚ್ಚಿನ ದೋಸೆಗಳನ್ನು ಮಾಡಿಡುವಳು. ಒಂದೆರಡು ದೋಸೆಗಳನ್ನು ತಿಂದಕೂಡಲೆ ಅನಂತರದ ದೋಸೆ ತಿನ್ನುವಾಗ ಕಹಿ ಹತ್ತಲು ಗಂಡನು ಕಾರಣ ಕೇಳುವನು. ಪತ್ನಿ ನಿಜವನ್ನು ಹೇಳುವಳು. ಹೆಣ್ಣುಮಕ್ಕಳ ಮೇಲೆ ಸಿಟ್ಟಿಗೆದ್ದ ತಂದೆಯು ಅವರನ್ನೆಲ್ಲ ಉಪಾಯಾಂತರದಿಂದ ಅಡವಿಯಲ್ಲಿ ಬಿಟ್ಟು ಬರುವನು. ಅಲ್ಲಿ ಆ ಮಕ್ಕಳ ಮೇಲೆ ಶಿವ-ಶಿವೆಯರ ಅನುಗ್ರಹ, ಅಡವಿಯಲ್ಲಿ ವಾಸಿಸುವ ಮುದುಕಿಯ ಮಾರ್ಗದರ್ಶನ. ಮುಂದೆ ರಾಕ್ಷಸನ ಮನೆಯ ವಾಸ. ಏಳರಲ್ಲಿ

ಆರು ಮಂದಿಗೆ ರಾಕ್ಷಸನ ಬೊಕ್ಕಸದ ಸಿರಿ ಸಿಗುತ್ತದೆ. ಕೊನೆಯವಳಾದ "ಕುಂಡ್ಯಾಕುರ್‌ಕುಳಾ"ಳಿಗೆ ಸಿಕ್ಕಿದ್ದು ಧೂಳು ತುಂಬಿದ (ಅಕ್ಕಿಯ ಧೂಳು) ರಾಕ್ಷಸನ ಉಗ್ರಾಣ. ಆದರೆ ಅದರಲ್ಲೇ ಅವಳಿಗೆ ಹೂತಿದ್ದ ಕನಕಾಂಬರ, ವಸ್ತ್ರ-ಒಡವೆ, ಬೆಳ್ಳಿಯ ನವಿಲು- ಇತ್ಯಾದಿಗಳು ಸಿಗುವವು. ನವಿಲಿನ ಸಹಾಯದಿಂದ ಈ ಅದೃಷ್ಟವಂತ ಹುಡುಗಿ ನಡೆಸುವ ಪವಾಡಗಳನ್ನು ಮೂಲ ಕಥೆಯನ್ನೇ ಓದಿ ಸವಿಯಬೇಕು. ಕಥೆಯ ಉದ್ದಕ್ಕೂ ಈ ಏಳನೆಯ ಮಗಳು ತನ್ನ ಉಳಿದ ಸಹೋದರಿಯರು ಕರುಬುವಷ್ಟು ಸಿರಿ ಪಡೆದು, ಅನುರೂಪ ವರನೊಡನೆ ದಾಂಪತ್ಯಸುಖ ಅನುಭವಿಸುವಳು. ತನ್ನ ಮುದಿ ತಾಯ್ತಂದೆಗಳನ್ನು ಕೂಡ ಕಾಪಾಡುವಳು. ಕಥೆಯಲ್ಲಿ ವ್ಯಕ್ತವಾದ ಅಸಾಮಾನ್ಯವಾದ ಕಲ್ಪನಾ ವೈಖರಿ ಬಹು ಸೊಗಸಾಗಿದೆ.

ಮತ್ತೊಂದು ಕಥೆ: " ಏಳು ಕನ್ಯೆಯರು ". ಇದು ಕನ್ನಡದಲ್ಲಿಯೂ ಕೂಡ ಪ್ರಚಲಿತವಿದೆಯೆಂದು ಕೇಳಿದ್ದೇನೆ. "ನೀವು ಯಾರ ಪುಣ್ಯದಿಂದ ಉಣ್ಣುವಿರಿ?"— ಎಂದು ತಂದೆ ಕೇಳುವ ಪ್ರಶ್ನೆಗೆ ಏಳರಲ್ಲಿ ಆರು ಮಂದಿ, "ತಂದೆಯ ಪುಣ್ಯದಿಂದ ಉಣ್ಣುವೆವು"- ಎಂದು ಉತ್ತರಿಸುವರು. ಆದರೆ ಕೊನೆಯ, ಏಳನೆಯ ಮಗಳು ಮಾತ್ರ ಬೇರೆ ರೀತಿ ಉತ್ತರ ಕೊಡುವಳು; ತಾನು, "ಗಂಡನ ಪುಣ್ಯದಿಂದ ಉಣ್ಣುವೆನು, ಬದುಕುವೆನು" ಎಂದು ಉತ್ತರಿಸುವಳು. ಅದಕ್ಕಾಗಿ ಅವಳು ಸಹಿಸಬೇಕಾದ ಕಷ್ಟ, ಅವಳಿಗೊದಗುವ ದೈವಸಹಾಯ, ರಾಯನ ಪುತ್ರನನ್ನು ಬದುಕಿಸುವುದು, ಅನಂತರ ಅವರಿಬ್ಬರ ವಿವಾಹ – ಇವೆಲ್ಲವೂ ಅಲ್ಲದೆ- ಕೊಂಕಣಿಯದೇ ಆದ ವಿಶಿಷ್ಟ ಸಂಗತಿಗಳೂ ಇಲ್ಲಿವೆ.

ಈ ವರೆಗೆ ನಾವು ಉದಾಹರಿಸಿದ ಕಥೆಗಳ ಉದಾಹರಣೆ ಗಳಲ್ಲಿ ಕೊಂಕಣಿಯ ೫-೬ ಕಥೆಗಳನ್ನಷ್ಟೇ ಇಲ್ಲಿ ಸಂಕ್ಷೇಪವಾಗಿ ನಿರೂಪಿಸಲಾಗಿದೆ. ಇದೇ ರೀತಿಯ ಇನ್ನೂ ಅನೇಕ ಕಥೆಗಳು ಉತ್ತರ ಕನ್ನಡದ ಕೊಂಕಣಿಗರಲ್ಲಿ ದೊರಯುಬಹುದು. ಅವು ಗಳ ವ್ಯವಸ್ಥಿತ ಸಂಗ್ರಹವಾದ ಮೇಲೆ, ಅವುಗಳ ಬೆಲೆ ಕಟ್ಟುವ ಕೆಲಸ ಮಾಡಬಹುದು. "ಕುಂಡ್ಯಾಕುರ್‌ಕುಳಾಲಿ ಕಾಣೀ", "ಕುಲ್ಯಾರ್‍ಲಿ ಕಾಣೀ", "ಜಾನಕೀ ಬಾಳಾಲೀ ಕಾಣೀ"-ಗಳಂಥ ಕಥೆಗಳು ಯಾವದೇ ಭಾಷೆಯ ಜನಪದ ಕಥೆಗಳಿಗೆ ಸರಿದೊರೆ ಯಾಗಿ ನಿಲ್ಲಬಲ್ಲವು.

ಗ್ರಾಮೀಣ ಸಂಸ್ಕೃತಿಯ ಮೇಲೆ ತೀವ್ರತಮವಾಗಿ ಉಂಟಾಗುತ್ತಿರುವ ವೈಜ್ಞಾನಿಕ ಅಭಿಯೋಗದಿಂದ- ಇಂದು ಕೊಂಕಣಿಯ ಜನಪದ ಸಾಹಿತ್ಯ ಕಣ್ಮರೆಯಾಗುತ್ತಲಿದೆ. ಅದು ನಮ್ಮ ಕೈಬಿಟ್ಟು ಹೋಗುವ ಮೊದಲೇ ಕೊಂಕಣಿಗರು ಎಚ್ಚತ್ತು ಈ ಅಕ್ಷಯ ನಿಧಿಯನ್ನು ರಕ್ಷಿಸಿಕೊಳ್ಳುವಲ್ಲಿ ಈ ಕಥೆಗಳ ಅಭ್ಯಾಸ ಒಂದು ಪ್ರೇರಣೆಯೊದಗಿಸಿದರೆ, ನಮ್ಮ ಈ ಅಭ್ಯಾಸ ಸಾರ್ಥಕವಾಗುತ್ತದೆ.

ಕನ್ನಡದಲ್ಲಿ 'ಜನಪದ ಕಥೆ' ಗಳ ಸಂಗ್ರಹ ಇತ್ತಿತ್ತಲಾಗಿ ಬಹು ವೇಗವಾಗಿ ಸಾಗಿದೆ. ಮೈಸೂರು, ಬೆಂಗಳೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳು, ಕರ್ನಾಟಕ ಜಾನಪದ ಪರಿಷತ್ತು ಮತ್ತು ನಾಡಿನ ಅನೇಕ ಸಂಘ-ಸಂಸ್ಥೆಗಳು- ಈಗಾಗಲೇ ಈ ಸಂಗ್ರಹ-ಸಂಪಾದನೆ-ವಿಮರ್ಶೆಯ ಕಾರ್ಯದಲ್ಲಿ ಪ್ರವೃತ್ತವಾಗಿವೆ. ಅನೇಕ ಉತ್ತಮ ಸಂಗ್ರಹಗಳೂ ಈಗ

ಬೆಳಕು ಕಂಡಿವೆ. ಆದರೆ ಕೊಂಕಣಿಯಲ್ಲಿ ಇನ್ನೂ ಆಮೆ ಗತಿಯಲ್ಲಿ ಕೆಲಸ ನಡೆದಿರುವಾಗ, ವ್ಯಾಪಕವಾದ ತುಲನೆ, ಪರಿಶೀಲನೆಗೆ ಸಾಮುಗ್ರಿ ದೊರೆಯುವುದಿಲ್ಲ. ಆದರೂ ದೊರೆತ ಕಥೆಗಳ ಆಧಾರದಿಂದ ಹೇಳುವುದಾದರೆ, ಈ ಕಥೆಗಳು ಗುಣ ಮಟ್ಟದಲ್ಲಿ ಕನ್ನಡದ ಜನಪದ ಕಥೆಗಳಷ್ಟೇ ಸೊಗಸಾಗಿವೆ; ಕೆಲವೊಂದು ಕಥೆಗಳು ಪರಸ್ಪರ ಪ್ರಭಾವಕ್ಕೆ ಒಳಗಾಗಿರುವ ಸಂಭವವಿದೆ. ಆದರೆ ಇಲ್ಲಿ ಉದಾಹೃತವಾದ ಯಾವ ಕಥೆಯೂ ಕನ್ನಡ ಜನಪದ ಕಥೆಗಳ ಮೇಲೆ ಪ್ರಭಾವ ಬೀರಿಲ್ಲ.

೩. ಕನ್ನಡ–ಕೊಂಕಣಿ ಜನಪದ ಗೀತಗಳು

ಕನ್ನಡದಲ್ಲಿ ಅನೇಕ ಪ್ರಕಾರದ ಜನಪದ ಗೀತಗಳು ದೊರೆಯುತ್ತವೆ. ಮುಖ್ಯವಾಗಿ ಬೀಸುವ ಹಾಡು, ಒನಕೆವಾಡು ಬೆಳುದಿಂಗಳ ಕೋಲಿನ ಹಾಡು, ಸುಗ್ಗಿಯಲ್ಲಿ ಹಂತಿಯ ಹಾಡು, ಸಮುದ್ರ ತೀರದಲ್ಲಿ ದೋಣಿಯ ಹಾಡು, ಜಾತ್ರೆ-ಮಹೋತ್ಸವ ಗಳಲ್ಲಿ ಲಾವಣಿ ಹಾಡು, ಪರಿಸೆಗಳಲ್ಲಿ ದುಂಧುಬಿ ಹಾಡು, ಗೊಂದಲಿಗರ ಹಾಡು, ಹೆಣ್ಣುಮಕ್ಕಳ ಗೌರಿ-ಶೀಗೆಯ ಹಾಡು, ಲಗ್ನಮುಹೂರ್ತಗಳಲ್ಲಿ ಸೋಬಾನೆ ಹಾಡು, ಶಿವರಾತ್ರಿ ಯುಗಾದಿ ಗಳಲ್ಲಿ ಕಂಬಿಯ ಹಾಡು, ಪುಣ್ಯತೀರ್ಥಗಳಲ್ಲಿ ವಿಶೇಷವಾಗಿ ಶ್ರಾವಣಮಾಸದಲ್ಲಿ ಹಳ್ಳಿಯ ಹರದೆಯರು ಅನೇಕ ದಿನಗಳ ವರೆಗೆ ಹಾಡುವ ಶಿವ-ಶರಣರ ಹಾಡು, ಎಲ್ಲಮ್ಮನ ಹಾಡುಗಳು, ರಾಮಾಯಣ-ಮಹಾಭಾರತಗಳ ಹಾಡುಗಳು–ಇವುಗಳು ಕನ್ನಡ ಪ್ರದೇಶದ ವೈಶಿಷ್ಟ್ಯಕ್ಕನುಸರಿಸಿ ಬೇರೆ ಬೇರೆ ಕಡೆಗಳಲ್ಲಿ ಪ್ರಚ ಲಿತವಿವೆ. ಈ ರೀತಿಯ ಹಾಡುಗಳ ವೈಶಿಷ್ಟ್ಯವನ್ನು ಮುಖ್ಯ ವಾಗಿ ಬೆಳವಲನಾಡು, ಮಲೆನಾಡು ಹಾಗೂ ಕರಾವಳಿಗಳ ಕನ್ನಡ ಜನಪದ ಸಾಹಿತ್ಯಗಳಲ್ಲಿ ಕಾಣಬಹುದಾಗಿದೆ. ನೃಪ ತುಂಗನೆಂದಂತೆ, "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿ"ಗಳಾದ ಈ ಜನರು ಬಾಳಿನ ಸಹಸ್ರವಿಧವಾದ ನೋವು-ನಲಿವುಗಳನ್ನು, ಆಶೆ–ಆಕಾಂಕ್ಷೆ

ಗಳನ್ನು ಇಂಥ ಲಕ್ಷಾವಧಿ ಹಾಡುಗಳಲ್ಲಿ ತೋಡಿಕೊಂಡಿದ್ದಾರೆ. ಕಲಿಯದೆಯೇ ಇವರು ಹಾಡುಗಳನ್ನು ಕಟ್ಟುತ್ತಿದ್ದರೆಂದು ಹೇಳಲಾಗುತ್ತಿದ್ದರೂ, ಖಂಡಿತವಾಗಿ ಈ ಜನರು ಅಸಂಸ್ಕೃತರಲ್ಲ; ಸುಸಂಸ್ಕೃತ ಜೀವಿಗಳು; ರಸಿಕರು. ಯಾವ ದೇಶದ ಜನಪದ ಸಾಹಿತ್ಯವನ್ನು ನೋಡಿದರೂ, ಅಲ್ಲಿ ವ್ಯಕ್ತವಾದ ಅನುಭವವು ಈ ಜನಗಳ ಸಮಷ್ಟಿಪ್ರಜ್ಞೆಯ ದ್ಯೋತಕವಾಗಿರುವದೇ ಹೆಚ್ಚು. ಅಂತೆಯೇ ಜನಪದ ಜೀವನದಲ್ಲಿ ವ್ಯಕ್ತಿಗಿಂತ ಸಮಾಜಕ್ಕೆ, ವ್ಯಷ್ಟಿಗಿಂತ ಸಮಷ್ಟಿಗೆ ಹೆಚ್ಚಿನ ಪ್ರಾಧಾನ್ಯ ಕೊಡಲಾಗುತ್ತಿದೆ ಯೆಂಬುದು ಈ ಹಾಡುಗಳ ಅಭ್ಯಾಸದಿಂದ ಕಂಡುಬರುವದು. ತಾವು ಬಾಳಿನಲ್ಲಿ ಎತ್ತಿಹಿಡಿದ ಮೌಲ್ಯಗಳನ್ನೇ ಈ ಜನರು ಸುಂದರವಾದ ಕಾವ್ಯವನ್ನಾಗಿಸಿ, ಆ ರೀತಿಯ ಬದುಕನ್ನು ಬಾಳಿದವರು. ಆದ್ದರಿಂದ ಜನಪದ ಗೀತಗಳಲ್ಲಿ ಬಾಳಿನ ಸಂಕೀರ್ಣತೆಗಾಗಲಿ, ಒಳತೋಟಿ ಮೊದಲಾದ ವೈಯಕ್ತಿಕ ಗುಣಗಳಿಗಾಗಲಿ ಎಡೆ ದೊರೆತಿದ್ದು ಕಡಿಮೆಯೇ.

ಈ ಜನಪದ ಗೀತೆಗಳು ಆ ಕಾಲದ ಸಮಾಜ ಜೀವನಕ್ಕೆ ಹಿಡಿದ ಕನ್ನಡಿಯಾಗಿವೆ. ಈ ಹಾಡುಗಳ ವೈಜ್ಞಾನಿಕ ಅಧ್ಯಯನ (ವಿಶೇಷತಃ ಮನೋವೈಜ್ಞಾನಿಕ, ಸಮಾಜ ಶಾಸ್ತ್ರೀಯ ಹಾಗೂ ಮಾನವಶಾಸ್ತ್ರಗಳ ದೃಷ್ಟಿಯಿಂದ) ಮಾನವ ವಿಕಾಸದ ವಿವಿಧ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತದೆಯೆಂದು ಈಗಾಗಲೇ ಈ ಕ್ಷೇತ್ರದಲ್ಲಿ ದುಡಿದು ಹಣ್ಣಾದ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಜೊತೆಗೆ ಜನರು ತಮ್ಮ ಬಾಳಿನಲ್ಲಿ ತಾವು ಎತ್ತಿ ಹಿಡಿದ ಚಿರಂತನ ಮೌಲ್ಯಗಳನ್ನು ಈ ಹಾಡುಗಳಲ್ಲಿ ಅಳವಡಿಸಿ ಸಾರವತ್ತಾದ ಕಾವ್ಯವನ್ನಾಗಿಸಿದ್ದಾರೆ.

ಕನ್ನಡ ಜನಪದ ಗೀತಗಳಲ್ಲಿ ಬಳಕೆಯಾದ ಛಂದಸ್ಸು ಮುಖ್ಯವಾಗಿ ತ್ರಿಪದಿ. ತ್ರಿಪದಿ ಕನ್ನಡ ಕಾವ್ಯದ ಛಂದೋ ಗಾಯತ್ರಿ, ಇನ್ನು ತ್ರಿಪದಿಯಲ್ಲದೆ ಕೆಲವೊಂದು ಸಂವಾದ–ಸಂಭಾಷಣೆಯ ಹಾಡುಗಳು ದ್ವಿಪದಿಯಲ್ಲಿಯೂ, ಕೆಲವೊಮ್ಮೆ ಚೌಪದಿಯಲ್ಲಿಯೂ ಇವೆ. ಕಥನ ಕವನಗಳು, ಲಾವಣಿಗಳು–ಮೊದಲಾದ ದೀರ್ಘವಾದ ಗೀತಗಳಲ್ಲಿ ಅನಿರ್ದಿಷ್ಟವಾದ ಛಂದಸ್ಸನ್ನು ಬಳಸಿದ್ದುಂಟು. ಕನ್ನಡದಂತೆ, ಕೊಂಕಣಿಯಲ್ಲಿಯೂ ಕೂಡ ಮುಖ್ಯವಾಗಿ ಅಥವಾ ತ್ರಿಪದಿ ರೂಪವನ್ನು ಅತಿ ನಿಕಟವಾಗಿ ಹೋಲುವಂಥ ಒಂದು ಛಂದೋಪ್ರಕಾರ ಜನಪದ ಗೀತಗಳಲ್ಲಿ ಬಳಕೆಯಾಗಿದೆ. ಕೊಂಕಣಿಯಲ್ಲಿ ಅದನ್ನು "ಓವಿ" ಎಂದು ಕರೆಯಲಾಗುತ್ತದೆ. ಈ ಓವಿಗಳಲ್ಲದೆ ಚೌಪದಿ, ಷಟ್ಪದಿಗಳಲ್ಲಿ ಬರೆಯಲಾದ ಕೆಲವೊಂದು ಕೊಂಕಣಿ ಜನಪದ ಗೀತಗಳು ದೊರೆಯುತ್ತವೆ. ಕೊಂಕಣಿಗರು ಅನಾದಿಯಿಂದ ಈ "ಓವಿ" ಛಂದೋಪ್ರಕಾರವನ್ನು ಮದುವೆಹಾಡುಗಳಿಗೇ ಅಲ್ಲದೆ ಇತರ ಶುಭ ಪ್ರಸಂಗಗಳಲ್ಲಿ ಹೇಳುವ ಹಾಡುಗಳಾಗಿ ಬಳಸಿದ್ದಾರೆ. 'ಓವಿ'ಗಳನ್ನು ಮುಖ್ಯವಾಗಿ ಹೆಣ್ಣುಮಕ್ಕಳು ಹೇಳುವುದು ರೂಢಿ. ಹೆಣ್ಣುಮಕ್ಕಳು ಈ "ಓವಿ"ಗಳನ್ನು ಹೇಳಿದಾಗಲೇ ಅಲ್ಲಿಯ ಧ್ವನಿವಿಶೇಷಗಳು ನಮಗೆ ವೇದ್ಯವಾಗುವವು. ಕನ್ನಡ ಜನಪದ ಗೀತಗಳಲ್ಲಿ ಹೆಂಗಸರ ಹಾಡುಗಳೇ ಬೇರೆ, ಗಂಡಸರ ಹಾಡುಗಳೇ ಬೇರೆ–ಈ ರೀತಿಯ ಎರಡು ವರ್ಗಗಳನ್ನು ಕಲ್ಪಿಸಲಾದದ್ದನ್ನು ಇಲ್ಲಿ ಸ್ಮರಿಸಬಹುದು. ಧರ್ಮಾರ್ಥ ಕಾಮಮೋಕ್ಷಗಳೇ ಪ್ರಧಾನವಾದ ಭಾರತೀಯ ಜೀವನ ಪದ್ಧತಿಯಲ್ಲಿ ಬದುಕಿದ ಕನ್ನಡಿಗರಾಗಲಿ, ಕೊಂಕಣಿಗರಾಗಲಿ ತಮ್ಮ ಭಾವನೆಗಳ

ಆವಿಷ್ಕಾರದಲ್ಲಿ ಈ ಭಾರತೀಯತ್ವದ ಪ್ರಧಾನ ಗುಣಗಳನ್ನು ವ್ಯಕ್ತಪಡಿಸುತ್ತಾರೆ. ಈ ದೃಷ್ಟಿಯಿಂದ ನಾವು ಮೇಲೆ ಹೇಳಲಾದ ಕೊಂಕಣಿ-ಕನ್ನಡ ಗೀತಗಳಲ್ಲಿ ವೈದೃಶ್ಯಗಳಿಗಿಂತ ಸಾದೃಶ್ಯಗಳೇ ಹೆಚ್ಚು ಕಂಡುಬಂದರೆ ಆಶ್ಚರ್ಯವಲ್ಲ. ಕೆಲವೊಮ್ಮೆ ಬಾಳಿನ ಒಂದೇ ಅನುಭವ ತಮ್ಮದೇ ಆದ ರೀತಿಯಲ್ಲಿ ಈ ಎರಡೂ ಭಾಷೆಗಳ ಸಾಹಿತ್ಯಗಳಲ್ಲಿ ಪ್ರಕಟವಾದದ್ದನ್ನು ಕಾಣಬಹುದು. ನಮ್ಮ ಜನಪದ ಗೀತಗಳಲ್ಲಿ ವ್ಯಕ್ತವಾದ ಜೀವನಕ್ಕೆ ಮೂಲ ತಳಹದಿಯಾಗಿರುವದು-ನಮ್ಮ ವೇದಗಳು, ಉಪನಿಷತ್ತುಗಳು, ರಾಮಾಯಣ-ಮಹಾಭಾರತಗಳಲ್ಲಿ ಉಕ್ತವಾದ ಜೀವನ ಪದ್ಧತಿ. ನಾಡಿನ ಅನೇಕ ಭಾಗಗಳಲ್ಲಿ ಜನ ಮನೋರಂಜನೆಗಾಗಿರುವ ಯಕ್ಷಗಾನ, ಹರಿಕಥೆ, ಪುಣ್ಯಕಥಾಶ್ರವಣಗಳು, ಪುರಾಣ ಶ್ರವಣಗಳು, ಬಯಲಾಟ ಮೊದಲಾದ ರೀತಿಯ ಸಾಮಾಜಿಕ ಶಿಕ್ಷಣದಿಂದ ಈ ಜನರು ತಾವು ಪಡೆದ ಅನುಭವವನ್ನೇ ಹಾಡುಗಳನ್ನಾಗಿ ಪರಿವರ್ತಿಸಿಕೊಂಡಿದ್ದಾರೆ.

ಈ ರೀತಿ ಈ ಎರಡೂ ಭಾಷೆಗಳ ಜನಪದ ಸಾಹಿತ್ಯಗಳಿಗೆ ಪ್ರೇರಕವಾದ ಪ್ರಧಾನ ಅಂಶಗಳನ್ನೂ, ಹಿನ್ನೆಲೆಗಳನ್ನೂ ಅರಿತ ಮೇಲೆ, ನಾವು ಈ ಎರಡೂ ಭಾಷೆಗಳಲ್ಲಿನ ಕೆಲವೊಂದು ಜನಪದ ಗೀತಗಳ (ವಿಶೇಷತಃ ಅನುಭವದಲ್ಲಿ ಸಮೀಪ ಸಾಮ್ಯದ) ಉದಾಹರಣೆಗಳನ್ನು ಅವಲೋಕಿಸಬಹುದು,

ಗಂಡ-ಹೆಂಡಿರ ಜಗಳ ಎಲ್ಲರಿಗೂ ಗೊತ್ತು. ಅದು ಹೇಗೆ ಇರುತ್ತದೆಂಬುದನ್ನು ಕನ್ನಡದ ಈ ಕೆಳಗಿನ ತ್ರಿಪದಿ ವರ್ಣಿಸುತ್ತದೆ :

ಗಂಡ-ಹೆಂಡಿರ ಜಗಳ ಗಂಧ ತೀಡಿದ್ಹಾಂಗ|
ನಿಂಗsಕ ಸೀರು ಎರೆದ್ಹಾಂಗ| ಹಿರಿಹೊಳೆಯ|
ಗಂಗವ್ವ ಸಾಗಿ ಹರಿದ್ಹಾಂಗ||

—ರಸಿಕರಾದವರಿಗೆ ಈ ತ್ರಿಪದಿಯ ವ್ಯಾಖ್ಯಾನ ಅನಗತ್ಯ. ಇನ್ನು ಇದೇ ರೀತಿಯ ಅನುಭವವನ್ನು ಕೊಡುವ ಒಂದು ಗಾದೆಯನ್ನು ನೋಡಿ:

"ಗೋವು ಬಾಯ್ಲಾಲೋ ಹಿಸ್ಸೋ,
ಮಧ್ಯೆ ಗೆಲಿಲೋ ತೋ ಪಿಸ್ಸೋ."

[ಗಂಡ – ಹೆಂಡಿರ ಜಗಳದಲ್ಲಿ ಹಾಗೂ ಹಿಸೆಪ್ರಕರಣ ದಲ್ಲಿ ಮಧ್ಯೆ ಪ್ರವೇಶಿಸುವವನೇ ಹುಚ್ಚ.]

ಕನ್ನಡದ ತ್ರಿಪದಿಯಲ್ಲಿ ಗಂಡ-ಹೆಂಡಿರ ಜಗಳ ಗಂಧ ತೀಡಿದಂತೆ ಎಂದಿದ್ದು-ಬಹುಶಃ ಈ ಜಗಳದ ಕಾರಣದಿಂದ ಸತಿ-ಪತಿಯರ ಮನಸ್ಸು ಇನ್ನೂ ಹತ್ತಿರ ಬಂದು ಹೊಂದಾಣಿಕೆಯಾಗುತ್ತದೆ ಎಂಬುದಕ್ಕಾಗಿರಬೇಕು. ಇದೇ ರೀತಿ ಅದು ಲಿಂಗಕ್ಕೆ ಅಭಿಷೇಕ ಮಾಡಿದ ಹಾಗೆ. ಆದರೆ ಕೊಂಕಣಿ ಗಾದೆಯಲ್ಲಿ–ಜಗಳಾಡುವ ಗಂಡ-ಹೆಂಡಿರನ್ನು (ಯಾವದೆ ಪ್ರಕಾರದ ನ್ಯಾಯವಿರಲಿ) ಸುಧಾರಿಸ ಹೊರಟ ತ್ರಯಸ್ಥ ವ್ಯಕ್ತಿಯೇ ಹುಚ್ಚನಾಗುತ್ತಾನೆ ಎಂದಿದೆ. ಇಲ್ಲಿ ಲೋಕವ್ಯವಹಾರ ತಿಳಿಯದವನಿಗೆ ಎಚ್ಚರಿಕೆಯ ಮಾತುಗಳಿವೆ.

ಇನ್ನೊಂದು ಕನ್ನಡ ತ್ರಿಪದಿಯ ಉದಾಹರಣೆ. ಇದು ಮಗುವಿನ ಕುರಿತು—

i ಕೂಸು ಇದ್ದ ಮನಿಗೆ ಬೀಸಣಿಕೆ ಯಾತಕ|
ಕೂಸು ಕಂದಯ್ಯ ಒಳಹೊರಗ| ಆಡಿದರ|
ಬೀಸಣಿಕೆ ಗಾಳಿ ಸುಳಿದಾವು||

ii ನನ್ನಯ್ಯನಂಥೋರು ಹನ್ನೆರಡು ಮಕ್ಕಳು|
ಹೊನ್ನೆಯ ಮರದ ನೆರಳಲಿ! ಆಡುವಾಗ
ಸನ್ಯಾಸಿ ಜಪವ ಮರೆತನು ||

—ಕನ್ನಡದ ಈ ಎರಡು ಉದಾಹರಣೆಗಳಲ್ಲಿ ಮಗುವಿನ ಕುರಿತು ನಮ್ಮಲ್ಲಿರುವ ಅಸದೃಶವಾದ ಪ್ರೀತಿಯನ್ನು ಬಹು ಸೊಗಸಾಗಿ ಹೇಳಲಾಗಿದೆ. ಮಗುವಿನಿಂದ ಬೀಸಣಿಕೆ ಗಾಳಿ ಬೀಸುವುದು ಹಾಗೂ "ಸನ್ಯಾಸಿ ಜಪವ ಮರೆತನು"—ಎನ್ನುವಲ್ಲಿಯ ಧ್ವನಿ ಶಕ್ತಿಯನ್ನು ಕಾವ್ಯಪ್ರೇಮಿಗಳು ಬಲ್ಲರು.

ಇದೇ ರೀತಿ ತಾಯಿಗೆ ಮಗುವಿನ ಮೇಲೆ ಇರುವ ಪ್ರೀತಿಯನ್ನು ಕೊಂಕಣಿಯ ಈ ಕೆಳಗಿನ ಗಾದೆಯಲ್ಲಿ ಹೇಳಲಾಗಿದೆ:

"ಚರ್ಡು ಪಾಯಾರಿ ಹಾಗ್ಲೆ ಮ್ಹಣ್ಣು ಜಾಂಘ್
ಕಾಪೂನ್ ಉಡೋವ್ಯಾಕ್ ಜಾತ್ವೇ ?"

[ಮಗು ತೊಡೆಯ ಮೇಲೆ ಹೇಸಿಗೆ ಮಾಡಿತೆಂದು (ಯಾರಾದರೂ) ತಮ್ಮ ತೊಡೆಯನ್ನು ಕೊಯ್ದುಕೊಳ್ಳುವರೆ?]

—ಈ ಗಾದೆ ನಮ್ಮೆಲ್ಲರಿಗೆ (ವಿಶೇಷತಃ) ತಾಯಿಗೆ ಮಗುವಿನ ಕುರಿತು ಇರುವ ಅವ್ಯಾಜ ಪ್ರೇಮವನ್ನು ಪ್ರಕಟಪಡಿಸುತ್ತದೆ. [ತತ್ ಕ್ಷಣ, ಕನ್ನಡ-ಕೊಂಕಣಿಯಲ್ಲಿನ ಎರಡು ಸಾಮ್ಯದ ಜನಪದ ಗೀತಗಳು ಹೋಲಿಕೆಗೆ ದೊರೆಯದ್ದರಿಂದ, ನಾನು

ಒಂದೆರಡು ಕೊಂಕಣಿ ಗಾದೆಗಳನ್ನು ಕೊಡಬೇಕಾಯಿತು. ಇಷ್ಟಾಗಿ ಗಾದೆಯೂ ಸಾಹಿತ್ಯದ ಒಂದು ಪ್ರಕಾರವೇ ತಾನೆ!]

ಮದುವೆ, ಮುಂಜಿ, ಸಮಾರಾಧನೆಗಳಲ್ಲಿ – ನೆಂಟರು-ಇಷ್ಟರು, ಬಂಧು-ಬಾಂಧವರು ಮೊದಲಾದವರೆಲ್ಲ ಒತ್ತಟ್ಟಗೆ ಕಲೆಯುವುದೂ, ಆ ವೇಳೆಯಲ್ಲಿ ಪರಸ್ಪರ ಹಾಸ್ಯ-ವಿನೋದಗಳು ನಡೆಯುವುದೂ ಲೋಕರೂಢಿ.

ಕನ್ನಡದ ಈ ತ್ರಿಪದಿಯಲ್ಲಿ 'ಬೀಗಿತ್ತಿ'ಯನ್ನು ಹಾಸ್ಯಕ್ಕೆ ಗುರಿ ಮಾಡಿದ ರೀತಿ ನೋಡಿ :

ಎಲ್ಲಾರು ಹಾಕ್ಯಾರ ಮಲ್ಗೀ ಹೂವಿನ ದಂಡಿ |
ಬೀಗಿತ್ತಿ ಹಾಕ್ಯಾಳ ಹುಲಪೆಂಡಿ | ಅವರಣ್ಣ |
ಕುದುರೆಗಿಲ್ಲೆಂದು ಕಸುಕೊಂಡ ||

—ಈಗ ಇದೇ ರೀತಿಯ ಕೊಂಕಣಿಯ ಒಂದು 'ಓವಿ' ಯನ್ನು ನೋಡೋಣ. ತನ್ನ ಮನಸ್ಸಿಗೊಪ್ಪುವ ಒಳ್ಳೆಯ ಅಳಿಯ ದೊರೆತನೆಂದು ಇಷ್ಟಗಲ ಮೋರೆ ಮಾಡಿಕೊಂಡು, ವಧುವಿನ ತಾಯಿ (ಕೊಂಕಣಿಯಲ್ಲಿ "ಯಜಮಾನಿ"ಯೆಂದು ಕರೆಯಲಾಗುತ್ತದೆ.) ದೊಡ್ಡ ಕುಂಕುಮದ 'ಬಟ್ಟ'ನ್ನು ಇಟ್ಟುಕೊಂಡು ಗರ್ವದಿಂದ ಮದುವೆಯ ಚಪ್ಪರದಲ್ಲಿ ಅತ್ತಿತ್ತ ತಿರುಗುತ್ತಿದ್ದಾಳೆ. ಅವಳನ್ನು ನೋಡಿದ ಜಾನಪದ ಕವಿಯಿತ್ರಿ ಈ ರೀತಿ ವರ್ಣಿಸುವಳು :

"ಜರೀಚೆ ಕಾಪ್ಡ| ದಿಗ ಹಾತಾ ಚೋಳಿ |
ಚೋವ್ನು ನಿಂದಾ ಕೇಲಿ ಯಜ್ಮಾನೀಕ ||"

—ಕನ್ನಡದ ಉದಾಹರಣೆಯಲ್ಲಿ 'ಹುಲಪೆಂಡಿ'ಯನ್ನು ನೋಡಿ ನಗೆ ಬಂದರೆ, ಕೊಂಕಣಿಯ ಉದಾಹರಣೆಯಲ್ಲಿ 'ಜರಿ ಸೀರೆ',

'ದೊಡ್ಡ ಅಂಚಿನ ಚೊೀಳಿ'-ಗಳನ್ನು ನೋಡಿದಾಗ ಉಳಿದವರಿಗೆ ನಗು ಏಕೆ ಬಂತೋ? ಬಹುಶಃ ಯಜಮಾನಿತಿಯ ಎಂದಿನ ಸಹಜ ರೂಪವನ್ನು ಮದುವೆಯ ವಿಶೇಷ ವೇಷಭೂಷಣ ಮರೆ ಮಾಡಿರಬೇಕು.

ಹೆಣ್ಣನ್ನು ಹೆತ್ತು ಅವಳನ್ನು ಬೆಳೆಸಿ, ಅನಂತರ ಪ್ರಾಪ್ತ ವಯಸ್ಕಳಾದ ಮಗಳನ್ನು ಗಂಡನ ಮನೆಗೆ ಕಳಿಸುವುದು ಲೋಕರೂಢಿ. ಆದರೂ ಮೊದಲ ಸಲ ಅವಳನ್ನು ಗಂಡನ ಮನೆಗೆ ಕಳಿಸುವಾಗ ಕಣ್ಣೀರು ಬಾರದ ತಂದೆ-ತಾಯಿಗಳಿಲ್ಲ. ಇದು ಹೆಣ್ಣು ಹೆತ್ತವರ ಪಾಡು :

" ಹೆಣ್ಣುಮಕ್ಕಳ ಕಳುವಿ ಕಣ್ಣೀಗಿ ನೀರ ತಂದು |
ಸಣ್ಣ ಸೆಲ್ಲೆದಲೆ ಮುಸುಗ್ಹಾಕಿ | ಹಡೆದಪ್ಪ |
ಹೆಣ್ಣು ಸಾಕೆಂದ ಜಲುಮಾಕೆ ||"

ಕೊಂಕಣಿಯ ಈ ಕೆಳಗಿನ 'ಓವಿ'ಯಲ್ಲಿ ಹೆಣ್ಣು ಹೆತ್ತವರ ಅನುಭವದ ಇನ್ನೊಂದು ಮುಖವನ್ನು ಅಭಿವ್ಯಕ್ತಿಸಲಾಗಿದೆ.

"ವಾಲಿವೈಲೊ ದುದ್ದೊ ವಾಲೀರಿ ಸರ್ ಸರ್sತಾ|
ವರದಕ್ಷಿಣ ದಿವ್ಚ್ಯಾಕs ಥರ್ ಥರ್sತಾ | ಬಾಪ್ಪs
ಆಮ್ಗೆಲೋ||

[ಕುಂಬಳ ಬಳ್ಳಿಯಲ್ಲಿನ ಕುಂಬಳವು ಬಳ್ಳಿಯ ಮೇಲೆ 'ಸರ ಸರ' ಸದ್ದು ಮಾಡುತ್ತಿದೆ. ನಮ್ಮ ತಂದೆಯಾದರೋ, ವರದಕ್ಷಿಣೆ ಕೊಡಲು ಥರ ಥರ ನಡುಗುತ್ತಾನೆ.]

ಕನ್ನಡದ ಉದಾಹರಣೆಯಲ್ಲಿ ಹೆಣ್ಣನ್ನು ಮನಸ್ಸಿಲ್ಲದ ಮನಸ್ಸಿನಿಂದ ಕಳುಹಿ, ಸಣ್ಣ ಶಲ್ಯದಿಂದ ಕಣ್ಣು ಒರೆಸಿಕೊಳ್ಳು ತ್ತಾನೆ ತಂದೆ. ಇಲ್ಲಿ ಹಾಗಲ್ಲ; ಕುಂಬಳ ಬಳ್ಳಿ ಹಾಗೂ ಕುಂಬಳದ ಪ್ರತಿಮೆಗಳು ಬಹಳ ಸುಂದರವಾಗಿ ಪ್ರಯೋಗಿ ಸಲ್ಪಟ್ಟವೆ. ಬಳ್ಳಿಯಿಂದ ತೊಟ್ಟು ಕಳಚಿ ಬೀಳಲು ತಯಾ ರಾಗಿ ನಿಂತ ಕುಂಬಳವೇ ಮದುವೆಗೆ ಬೆಳೆದು ನಿಂತ ಹೆಣ್ಣು. ಅಂತೆಯೇ ತಂದೆಗೆ ವರದಕ್ಷಿಣೆ ಕೊಡಬೇಕಾದ ಚಿಂತೆ. ಹೇಗಿ ದ್ದರೂ, ಕನ್ನಡದಲ್ಲಿ ಹೆಣ್ಣನ್ನು ಕಳುಹಿಸುವಾಗ ಕಣ್ಣೀರು ಬಂದರೆ, ಕೊಂಕಣಿಯಲ್ಲಿ ಹೇಳಿದ ಈ 'ಓವಿ'ಯಲ್ಲಿ, ಹೆಣ್ಣು ಬೆಳೆದು ನಿಂತ ಕೂಡಲೇ ವರದಕ್ಷಿಣೆಗಾಗಿ ತಂದೆಯನ್ನು 'ಥರ ಥರ' ನಡುಗಿಸಿ, ಕಣ್ಣೀರು ತರಿಸಬಹುದು. ಅಂತೂ ಎರಡೂ 'ಕಣ್ಣೀರಿನ' ಪ್ರಸಂಗಗಳೆ! ಈ 'ಓವಿ'ಯಲ್ಲಿ ಕೊಂಕಣಿಗರ ಸಮಾಜದಲ್ಲಿ ವಿಶೇಷವಾಗಿ ಕಾಡುವ 'ವರದಕ್ಷಿಣೆ ಭೂತ'ದ ಅನುಭವವೂ ಸೇರಿದೆ.

ಈಗ 'ಚೌಪದಿ'ಯಲ್ಲಿ ವ್ಯಕ್ತವಾದ ಒಂದು ಕೊಂಕಣಿಯ ಹಾಡನ್ನು ನೋಡಬಹುದು. ಕಾರವಾರದ ಸುಂಕೇರಿಯಲ್ಲಿಯ ಶ್ರೀಮತಿ ಆನಂದಿಬಾಯಿ ಜನಾರ್ದನಭಟ್ಟ ಎಂಬವಳು ನನಗೆ ನಿರೂಪಿಸಿದ ಒಂದು 'ಮದುವೆ' ಹಾಡಿದು. ಈ ಹಾಡಿನಲ್ಲಿ ಮದುಮಕ್ಕಳ ವಿವಾಹ ಸಮಾರಂಭ ಮುಗಿದು, ಫಲಶೋಭನ ವಾಗಿ, ಗಂಡನೊಂದಿಗೆ ಹೆಣ್ಣುಮಗಳು ಹೊಸ ಬಿಡಾರಕ್ಕೆ (ಮನೆಗೆ) ಹೋಗುವಾಗ ತಂದೆ-ತಾಯಿಗಳು-ಆಪ್ತರು ಪಡುವ ಅನುಭವ ವಿಶೇಷವಾಗಿದೆ. ಈ ಪದ್ಯದ ಆರಂಭ ಹೀಗಿದೆ :

"ಲಗ್ನ್ ಜ್ಞಾಲೆ ವೈಶಾಖಾಂತ್
ಫಲಶೋಭನ ಆಷಾಢಾಂತ್
ಬಿರಾಡಕರ್‌ಕ್ಕಾ ಪಾವಸಾಳ್ಯಾಂತ್
ಶಿವಣ್ಣಾಲೆ ಶಾಂತೂ"

[ಲಗ್ನವಾಯಿತು ವೈಶಾಖದಲ್ಲಿ,
ಫಲಶೋಭನವು ಆಷಾಢದಲ್ಲಿ
ಬಿಡಾರ ಹೂಡಬೇಕು ಮಳೆಗಾಲದಲ್ಲಿ
ಶಿವಣ್ಣನ್‌ಶಾಂತೂ]

ಕೊನೆಯದಾಗಿ 'ಕನ್ಯಾಸೆರೆ'ಯಿಂದ ವಿಮುಕ್ತಿ ಹೊಂದಿದ ತಾಯ್ತಂದೆಗಳದು ಈ ರೀತಿ ವ್ಯಕ್ತವಾಗಿದೆ:

"ಆವಯ್ಕ್ ಪಡಲೀ ಪುಷ್ಕಳ ಚಿಂತಾ
ಫಾರೀಕ ಜ್ಞಾಲೀ ಸಗಳೀ ಕಂಥಾ
ಸುಟ್ಲೆ ಆಪ್‌ಣ ಆಸೇ ತೀ ಮ್ಹಣತಾ
ಖರೇಂಚ್ ಸಾಂಗ್ಚೆ ತೀಣೆ"

[ತಾಯಿ ಜೀವಕೆ ಬಹಳ ಚಿಂತೆಯು
ಮುಕ್ತವಾಯಿತು ಎಲ್ಲ ಕಂತೆಯು
ಇಂದು ಬಿಡುಗಡೆ ದಣಿದ ಜೀವಕೆ,
ನಿಜವ ನುಡಿದಳು ಆಕೆಯು.]

ಈ ಹಾಡಿನ ಕೊನೆಯ ನಾಲ್ಕು ಚರಣಗಳನ್ನು ಪರಿಶೀಲಿಸಿದರೆ, ಇದರ ಮೇಲೆ ಆಧುನಿಕ ನಾಗರಿಕತೆಯ ಪ್ರಭಾವ ಸಾಕಷ್ಟು

ಆಗಿದೆಯೆಂದು ತೋರಿಬರುವುದು. ಈಗಿನ ಕಾಲದ ಹೆಣ್ಣು ಮಕ್ಕಳ ಸ್ವಭಾವವನ್ನು ಈ ಕೆಳಗಿನ ಸಾಲುಗಳು ಚೆನ್ನಾಗಿ ಚಿತ್ರಿಸುವವು:

"ಆತಾಽ ಕಾಲಾಚ್ಯಾ ಚಲ್ಯಾಕಽ ತರೀ
ಬಿರಾಡ್ಽ ಕರಚೆ ಉಮೇದ್ಽ ಭಾರಿ
ಬಾಯ್ಲ್ಽ ಮಳ್ಯಾರಿ ಮೊಗಾಚೀ ಪೋರಿ
ಆವ್ಽಡ್ಽ ಪುಷ್ಕಳ"

[ಹೊಸಗಾಲದ ಹುಡಿಗಿಯರಿಗೋ,
ಬಿಡಾರ ಹೂಡುವ ಉಮೇದಿ ಭಾರಿ
ಹೆಂಡತಿಯೆಂದರೆ ಪ್ರೇಮದ ಪುತ್ಥಳಿ,
ಮೆಚ್ಚಿಕೆ ಪುಷ್ಕಳವು.]

ನಾಲ್ವತ್ತು ಸಾಲುಗಳ ಈ ಹಾಡಿನ ಕೇವಲ ೧೨ ಸಾಲುಗಳನ್ನು ಇಲ್ಲಿ ಉದಾಹರಿಸಲಾಗಿದೆ. ಈ ಹಾಡಿನಲ್ಲಿ ವ್ಯಕ್ತವಾದಂಥ ಅನುಭವವನ್ನು ಕೊಡುವ ಕನ್ನಡದ ಅನೇಕ ತ್ರಿಪದಿಗಳುಂಟು. ಅಭ್ಯಾಸಿಗಳು ಕನ್ನಡ ಜನಪದ ಸಾಹಿತ್ಯವನ್ನು ಪರಿಶೀಲಿಸಬಹುದು.

ಕನ್ನಡ ಜನಪದ ಸಾಹಿತ್ಯದಲ್ಲಿ ಜೋಗುಳ ಪದ್ಯಗಳು ಆಯಾ ಪ್ರದೇಶಗಳ ವೈಶಿಷ್ಟ್ಯಕ್ಕನುಸರಿಸಿ, ಅನೇಕ ದೊರೆಯುತ್ತವೆ. ಅದೇ ರೀತಿ, ಕೊಂಕಣಿಯಲ್ಲಿ ಕೂಡ ಮಕ್ಕಳನ್ನು ಆಡಿಸುವಾಗ, ಮಲಗಿಸುವಾಗ, ತೊಟ್ಟಿಲು ತೂಗುವಾಗ— ಜೋಗುಳಗಳನ್ನು ಹೇಳುವುದು ಸಾಮಾನ್ಯ!

ಕೊಂಕಣಿಯ ಒಂದು ಜೋಗುಳ ಪದ್ಯ!

"ಕುರ್ ಕುರ್ರರೇ ಕಾನಾ
ಗಾಯುs ಮಶ್ಶ್ಯೊ ಗೆಲ್ಯೊ ರಾನಾ
ಆಂಬುಣ ಹಾಡ್ರೈ ಮಾಮಾ
ಗಾಯುs ಮಶ್ಶ್ಯಾಕ
ಗಾಯುs ಗೊಟ್ಯಾಂತs
ದೂದs ತಾಟ್ಯಾಂತs
ಬಾಳ ಪಾಳ್ಯಾಂತs ನೀದs ಕಾಡsತಾ||"

—ಪಶುಪಾಲನೆಯ ವೃತ್ತಿಯನ್ನನುಸರಿಸಿದ ಆ ದಿನಗಳಲ್ಲಿ, ಕೊಂಕಣಿ ಹೆಣ್ಣು ಮಗಳೊಬ್ಬಳು ಜೋಗುಳ ಹೇಳುವಂತೆ ಈ ಹಾಡು ಪ್ರಾರಂಭವಾಗಿದೆ. 'ಕುರ್ರs ಕುರ್ರs' ಎಂದು ಸಪ್ಪಳ ಮಾಡುವ ಕಾಡು (ಕಾನಾ), ದನಕರುಗಳು ಹೋದವು ಕಾಡಿಗೆ (ರಾನಾ)—ಎಂದು ಹೇಳುವಾಗ, ತೊಟ್ಟಿಲಲ್ಲಿ ಮಲಗಿದ ಮಗು ಗೋವಿನ ಕಥೆ ಕೇಳುತ್ತ ನಿದ್ದೆ ಮಾಡುವುದು— ಮೊದಲಾದ ಸಂಗತಿಗಳು ಈ ಲಾಲಿಯಲ್ಲಿ ಚಿತ್ರವತ್ತಾಗಿ ಮೂಡಿ ಬಂದಿವೆ.

ಅಳುವ ಕಂದನನ್ನು ನೋಡಿದ ಜನಪದ ಕವಯಿತ್ರಿ ಈ ರೀತಿ ಹಾಡುತ್ತಾಳೆ:

ಅಳುವ ಕಂದನ ತುಟಿಯು ಹವಳದ ಕುಡಿಯಾಂಗ |
ಕುಡಿಹುಬ್ಬು ಬೇವಿನೆಸಳಂಗ | ಕಣ್ಣೋಟ |
ಶಿವನ ಕೈಅಲಗು ಹೊಳೆದಂಗ ||

ಈಗ ಕೊಂಕಣಿಯ 'ಜೋಗುಳ'ವೊಂದರಲ್ಲಿ ಮಗುವನ್ನು ವರ್ಣಿಸುವ ಪರಿ ನೋಡಿ:

"ನೀಂದರೆ ಬಾಳಾ ಚಾಂಪ್ಯಾ ಕಳ್ಯಾ ಮಾಗ್ಗಿಲೇ
ಮಾಂಡೀರs| ನೀದsಕಾಣ್ಣಾ ರಣ್ಣೆ ಸೊಣ್ಣಾ ಬಸ್ರೆ
ಹಾಂಡೀರಿ||"

ಬಹು ಹೊತ್ತಿನ ವರೆಗೆ ರಮಿಸಿದರೂ, ನಿದ್ದೆ ಹೋಗದ ಮಗುವನ್ನು ತಾಯಿ "ಚಾಂಪ್ಯಾ ಕಳ್ಯಾ" (ಸಂಪಿಗೆಯ ಮೊಗ್ಗು) ಎಂದು ಕರೆದು ಆತನನ್ನು ನಿದ್ದೆ ಹೋಗುವಂತೆ ಮಾಡುತ್ತಾಳೆ. ಆ ಮಗು ಎಷ್ಟು ಕಾಡಿದರೂ, ಆ ತಾಯಿಗೆ ಅದು ಸಂಪಿಗೆಯ ಮೊಗ್ಗೇ!

ಕನ್ನಡದ ತ್ರಿಪದಿಯಲ್ಲಿ ಈ ಮಗುವನ್ನು ಇನ್ನೂ ಪ್ರಭಾವಶಾಲಿಯಾಗಿ ವರ್ಣಿಸಲಾಗಿದೆ. ಅಳುವ ಕಂದನ ತುಟಿ ಹವಳದ ಕುಡಿಯ ಹಾಗೆ, ಕುಡಿಹುಬ್ಬು ಬೇವಿನ ಎಸಳು ಎಂದು ಹೇಳಿ, ಕೊನೆಯಲ್ಲಿ ಮಗುವಿನ 'ಕಣ್ಣೋಟವು' ಶಿವನ ಕೈಯಲ್ಲಿನ ಅಲಗು ಹೊಳೆದಂತೆ– ಎಂಬ ಆಧ್ಯಾತ್ಮಿಕ ಸಂಕೇತದಲ್ಲಿ ಮುಕ್ತಾಯವಾಗುತ್ತದೆ. ನಿಷ್ಕಪಟ ಹಾಗೂ ಮುಗ್ಧ ಮಗುವಿನ ನಿಷ್ಕಲ ರೂಪದಲ್ಲಿ ಸಾಂತವು ಅನಂತವನ್ನು ಗುರುತಿಸಿದ ದರ್ಶನ ಈ ಪದ್ಯದಲ್ಲಿ ಧ್ವನಿತವಾಗಿದೆ.

ಇದೇ ಸಂದರ್ಭದಲ್ಲಿ ಕನ್ನಡ-ಕೊಂಕಣಿ ಎರಡೂ ಜನಪದ ಸಾಹಿತ್ಯದಲ್ಲಿ ಹೇರಳವಾಗಿ ದೊರೆಯುವ "ಶಿಶುಪ್ರಾಸ"ಗಳನ್ನು ಸ್ವಲ್ಪ ನೋಡಬಹುದು. ಶಿಶುಪ್ರಾಸಗಳು ಮಕ್ಕಳಿಂದಲೇ

ರಚಿತವಾಗಿರಬೇಕೆಂದೇನೂ ಇಲ್ಲ. ಮಕ್ಕಳ ಮನಃಸ್ಥಿತಿಯನ್ನು ಅರಿತ ಹಿರಿಯರು ಕೂಡ ಅವನ್ನು ರಚಿಸಿರಬಹುದಾಗಿದೆ. ತಟ್ಟನೆ ನೆನಪಿಗೆ ಬರುವ ಕನ್ನಡದ ಈ 'ಶಿಶುಪ್ರಾಸ'ಗಳು ಮಕ್ಕಳು ಆಟವಾಡುತ್ತಿರುವಾಗ ಕನ್ನಡ ಮಕ್ಕಳ ಬಾಯಲ್ಲಿರುವುದು ಸಾಮಾನ್ಯ.

(i) ಅದಲು ಬದಲು ಕಂಚೀ ಕದಲು
ಅವಳಾ ಬಿಟ್ಟು ಇವಳಾರು ?

(ii) ಬಿಟ್ಟೀ ಬಿಟ್ಟಿ ಬೆಳಗಾತು
ತಟ್ಟಿಮನೆ ಹಾಳಾತು
ಹಾಳು ಗೋಡೆ ದೆವ್ವ ಬಂದು ಬಡಿತು ।

(iii) ಕಣ್ಣಾ ಮುಚ್ಚೆ
ಕಾಡೇ ಗೂಡೆ
ನಮ್ಮಕ್ಕಿ ಹಿಡ್ಕಂಡ್
ನಿಮ್ಮಕ್ಕಿ ಬಿಟ್ಟೀ ಬಿಟ್ಟಿ

ಈಗ ಕೊಂಕಣಿಯಲ್ಲಿನ ಈ ಕೆಳಗಿನ ಶಿಶುಪ್ರಾಸಗಳನ್ನಷ್ಟು ಲಕ್ಷಿಸಿ :

(i) ಆದ್ದುಗುಲು ದುದ್ದುಗುಲು ಥೈಂಯಾಚಿ
ಸಿಂಪೆ ಪೇಶs ಗಂಧಾಚಿ
ಗಂಧಾಲೋಟ ವ್ಹಾಂವಣsತಾಚಿ
ರಾಕ್ಷಸ ರಾಣಿ ಚೊಯ್ತಾಚಿ
ಕೂ...ಮ್ಹಣಾರೇ......ಕೂ...ಮ್ಹಣಾ..॥

(ii) ಮಾಂಕಡಾಚೆ ಪಿಲಾs
(ತುಜೋ) ಗೋವs ಕಂಯಿ ಗೆಲಾ
ತಾಯಕಿಳ್ಯಾಚೆ ಬಡ್ಡಿ ಗೇವ್ನು
ಡೋಳು ವಾಜೋವ್ಚ್ಯಾಕs ಗೆಲಾ
ಡೋಳಾಚಾ ಬಾವ್ಣಾ
ಪರsಬ ಕೆನ್ನಾ
ಫಲsತಾ ಎನ್ನಾ
ಡಾಂ—ಡುಂ—ಜಾತ್ತಾ ||

ಕನ್ನಡ ಉದಾಹರಣೆಯಲ್ಲಿ "ಹಾಳುಗೋಡೆಯ ದೆವ್ವ ಬಂದು ಬಡಿತು" ಎಂಬ ಮಾತು ಆಟ ನಡೆಯುವಾಗ ಮಕ್ಕಳನ್ನು ಎಚ್ಚರಿಸುವುದಕ್ಕಿರಬೇಕು. ಅದೇ ಧಾಟಿಯಲ್ಲಿ ಕೊಂಕಣಿಯಲ್ಲಿ ಹೇಳಿದ "ರಾಕ್ಷಸ-ರಾಣಿ ಚೊಯ್ತಾಚಿ" (ರಾಕ್ಷಸನೂ, ರಾಣಿಯೂ ನೋಡುತ್ತಿರುವರು), "ಕೂ-ವ್ಹಣಾರೇ-ಕೂ-ವ್ಹಣಾ" - (ಕೂ-ಅನ್ನಿರಿ, ಕೂ-ಅನ್ನಿರಿ) - ಎಂಬ ಕೊನೆಯ ಸಾಲುಗಳಲ್ಲಿಯ ಮಾತುಗಳು ಕನ್ನಡ ಶಿಶುಪ್ರಾಸಗಳ "ಬಿಟ್ಟೇ ಬಿಟ್ಟಿ" –"ನಿಮ್ಮಕ್ಕಿ ಬಿಟ್ಟೇ ಬಿಟ್ಟಿ"– ಎಂಬುದಕ್ಕೂ ಸರಿಯಾಗಿ ಹೊಂದಿಕೆಯಾಗುವಂತಿದೆ. ಈ ರೀತಿಯ ಆಟದ ಓಟವಾಗಲಿ, ಕೂಗಾಟವಾಗಲಿ ಎಲ್ಲ ಮಕ್ಕಳಿಗೂ ಸಾಮಾನ್ಯವಾಗಿದೆ.

ಈ ವರೆಗಿನ ವಿವರಗಳಲ್ಲಿ ಕೊಂಕಣಿಯಲ್ಲಿನ 'ಓವಿ'ಗಳು, ಚೌಪದಗಳು ಹಾಗೂ ಇತರ ಕೆಲವು ಛಂದೋಪ್ರಕಾರಗಳನ್ನು ಕನ್ನಡದ ಅದೇ ಪ್ರಕಾರದ ಉದಾಹರಣೆಗಳೊಡನೆ ತುಲನಾತ್ಮಕ

ವಾಗಿ ನೋಡಲಾಗಿದೆ. ಇನ್ನು ಜನಪದ ಕಾವ್ಯದಲ್ಲಿ ದೊರೆಯುವ ಲಾವಣಿ. ಕಥನ-ಕವನಗಳನ್ನು ಇಲ್ಲಿ ಪರಿಶೀಲಿಸಲಾಗಿಲ್ಲ. ಅದಕ್ಕೆ ಕಾರಣ— ಅವು ನನ್ನ ಸದ್ಯದ ಸಂಗ್ರಹದಲ್ಲಿ ಇಲ್ಲದಿರುವುದು. ಮುಂದೆ ಸಂಗ್ರಹವಾದಾಗ ನೋಡಬಹುದು.

೪. ಕನ್ನಡ–ಕೊಂಕಣಿ ಒಗಟುಗಳು

ಕನ್ನಡದಲ್ಲಿ ಗಾದೆಗಳು ಹಾಗೂ ಒಗಟುಗಳನ್ನು ಕುರಿತು ಈಗ ಸಾಕಷ್ಟು ಸಂಗ್ರಹಗಳು–ಕೋಶಗಳು ಬಂದಿವೆ. ಆದರೆ ಕೊಂಕಣಿಯಲ್ಲಿ ಇಂತಹ ಸಂಗ್ರಹ ಕಾರ್ಯ ಆಮೆಗತಿಯಲ್ಲಿ ಸಾಗಿದೆ. ಕೊಂಕಣಿ "ಒಗಟುಗಳು ಹಾಗೂ ಗಾದೆಗಳ" ಕುರಿತು–ಈ ವರೆಗೆ ನನಗೆ ತಿಳಿದ ಮಟ್ಟಿಗೆ ನಾನು ನೋಡಿದ್ದು–ಶ್ರೀ ಎಸ್. ಎಸ್. ತಾಳಮುಕ್ಕಿಯವರು ಇಂಗ್ಲೀಷಿನಲ್ಲಿ ಬರೆದ, "Konkani Proverbs, Riddles"— ಒಂದೇ ಸಂಗ್ರಹ ಗ್ರಂಥ. (ಇಲ್ಲಿ ಗೋವಾದಲ್ಲಿ ನಡೆದ ಕೊಂಕಣಿ ಜನಪದ ಸಾಹಿತ್ಯದ ಸಂಗ್ರಹ ವಿಚಾರ ಹೇಳಿಲ್ಲ.) ಒಗಟುಗಳು ಎಲ್ಲ ಭಾಷೆಗಳಲ್ಲೂ ದೊರೆಯುತ್ತವೆ. ಆರಂಭದ ನಮ್ಮ ಪರಿಶೀಲನೆಯಲ್ಲಿ ಹೇಳಿದಂತೆ— ಒಗಟುಗಳಾಗಲಿ, ಗಾದೆಗಳಾಗಲಿ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಹೋಗುವುದು ತೀರ ಸಾಮಾನ್ಯ. ಕನ್ನಡ-ಕೊಂಕಣಿಗಳು ಶತಮಾನಗಳಿಂದ ಜೊತೆ ಜೊತೆಯಾಗಿ ಬಾಳಿದ ಭಾಷೆಗಳಾದ್ದರಿಂದ ನೂರಾರು-ಸಾವಿರಾರು ಕನ್ನಡ ಒಗಟುಗಳು ಕೊಂಕಣಿಯಲ್ಲಿ ಸೇರ್ಪಡೆಯಾಗಲು ಶಕ್ಯವಿದೆ. ಇಂಥ ವೇಳೆಯಲ್ಲಿ ಅಚ್ಚ ಕೊಂಕಣಿ ವಾತಾವರಣದಿಂದ ಮೂಡಿಬಂದ ಒಗಟುಗಳಾವವು ?– ಎಂಬುದನ್ನು ಸ್ವಲ್ಪ ಮಟ್ಟಿಗೆ ಗುರುತಿಸಲು ಇಲ್ಲಿ ಪ್ರಯತ್ನಪಡಲಾಗಿದೆ.

ಒಗಟುಗಳನ್ನು ಕೊಂಕಣಿ ಭಾಷೆಯಲ್ಲಿ "ಉಮಾಣಿ" (ಹುಮಾಣಿ)-ಗೋವಾ ಕಡೆಯಲ್ಲಿ "ಪಾರ್ಕೋಣಿ"(Parkoni) ಎಂದು ಕರೆಯುತ್ತಾರೆ. ಒಗಟುಗಳು ಹಾಗೂ ಗಾದೆಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಇಷ್ಟೆ, ಒಗಟು ಬುದ್ಧಿಜನ್ಯವಾದ ಸೃಷ್ಟಿ. ಮಾನವನು ತಾನು ನೋಡಿದ ವಸ್ತುವನ್ನು ಇದ್ದಕ್ಕಿದ್ದಂತೆ ಹೇಳಿದರೆ, ಅದು ಅವನಿಗೆ ಆನಂದ ಕೊಡುವುದಿಲ್ಲ. ಆದ್ದರಿಂದ ತಾನು ಸೃಷ್ಟಿಯಲ್ಲಿ ನೋಡಿದ ಸಂಗತಿಗಳನ್ನು ಪದಾರ್ಥಾಂತರಗಳಿಂದ ವರ್ಣಿಸಿ, "ಅವು ಏನು?" 'ಹಾಗೆಂದರೇನು?' — ಎಂದು ಸಮಸ್ಯೆಗಳನ್ನಾಗಿಸಿ — ಅವುಗಳನ್ನು ಒಡಚಲು ತನ್ನ ಸರೀಕರನ್ನು ಕರೆಯುತ್ತಾನೆ. ಒಗಟುಗಳಲ್ಲಿ ಕೆಲವು ತೀರ ಸಾಮಾನ್ಯವಾದವುಗಳಿದ್ದರೆ, ಇನ್ನು ಕೆಲವು ತೀರ ಗಹನ ವಿಚಾರಗಳಾದ ಆಧ್ಯಾತ್ಮ-ದೇವರುಗಳನ್ನು ಕುರಿತು ಕೂಡ ಇರುತ್ತವೆ. ಒಟ್ಟನಲ್ಲಿ ಈ ಒಗಟುಗಳು ಬುದ್ಧಿಜನ್ಯ ವ್ಯಾಪಾರಗಳಾಗಿ, ಮನಸ್ಸಿಗೆ ಆಟದಂತೆ ಆನಂದ ಕೊಡಬಲ್ಲವು. ಕನ್ನಡ-ಕೊಂಕಣಿ ಭಾಷೆಗಳಲ್ಲಿನ ಈ ಒಗಟುಗಳು ದ್ವಿಪದಿ, ತ್ರಿಪದಿ, ಚೌಪದಿ ಹಾಗೂ ಇನ್ನಿತರ ಛಂದೋಬಂಧಗಳಲ್ಲಿ ಕೂಡ ದೊರೆಯುತ್ತವೆ. ವೇದಕಾಲೀನ ಸಾಹಿತ್ಯದಲ್ಲಿ ಕೂಡ ಒಗಟುಗಳು ದೊರೆತಿವೆ.

ಈಗ ಕನ್ನಡ - ಕೊಂಕಣಿಗಳಲ್ಲಿ ಒಂದೇ ವಸ್ತುವನ್ನು ಹೇಳುವ ಒಗಟುಗಳು ಹೇಗೆ– ಈ ಎರಡೂ ಭಾಷೆಗಳಲ್ಲಿ ಭಿನ್ನ-ಭಿನ್ನ ಪದಾರ್ಥಾಂತರಗಳಿಂದ—ಅಭಿವ್ಯಕ್ತಿ ಪಡೆದಿವೆ ಎಂಬುದನ್ನು ಕೆಲವು ಉದಾಹರಣೆಗಳ ಬೆಳಕಿನಲ್ಲಿ ಪರಿಶೀಲಿಸಬಹುದು.

ಈ ಕೆಳಗಿನ ಉದಾಹರಣೆಗಳಲ್ಲಿ ಮೊದಲು ಕೊಂಕಣಿಯ ಒಗಟುಗಳನ್ನೂ, ಜೊತೆಗೆ ಅವುಗಳ ಕನ್ನಡ ಅರ್ಥವನ್ನೂ ಹಾಗೂ ಈ ಒಗಟುಗಳಿಗೆ ಕನ್ನಡದ ತೀರ ಸಮೀಪದ ಒಗಟುಗಳ ಉದಾಹರಣೆಗಳನ್ನೂ ಕೊಡಲಾಗಿದೆ.

ಕೊಂಕಣಿ : (೧) "ವಾಟ್ಟಿ ಭೋರ್ನು ಥಂಯಿ
ಮಾಜs ಕಡೇನs ಪಿವ್ಹಾ ಜಾಯ್ನಾ
ತುಜ್ಜೆ ಕಡೇನs ಪಿವ್ಹಾ ಜಾಯ್ನಾ ||

ಉತ್ತರ:– ಚುನ್ನೊ

[ಬಟ್ಟಲು ತುಂಬಿ ಮೊಸರು, ನಾನೂ ಕುಡಿಯಲಿಕ್ಕೆ ಬರುವದಿಲ್ಲ, ನೀನೂ ಕುಡಿಯಲಿಕ್ಕೆ ಬರುವುದಿಲ್ಲ.]

ಕನ್ನಡ : ಕಲ್ಲರಳಿ ಹೂವಾಗಿ ಎಲ್ಲರಿಗೂ ಬೇಕಾಗಿ |
ಮಲ್ಲಿಕಾರ್ಜುನನ ಶಿಖರಕ್ಕೆ ಬೆಳಕಾಗಿ |
ಬಲ್ಲವರು ಹೇಳಿ ಸರ್ವಜ್ಞ ||

ಉತ್ತರ:— ಸುಣ್ಣ.

(೨) "ತೀಕ ತೀಕs ಪಾನ,
ಕರ್ಬಂಲಾಚೆ ರಾನs
ತೆಜ್ಜೆ ನಾಂವs ಸಾಂಗತ್ತಾ ಜಾಲ್ಯಾರಿ
ತುಕ್ಕಾ ಉತ್ನಾರ ಮಾನs"

ಉತ್ತರ:— ಆಲ್ಲೆ.

[ಬಹಳ ಖಾರದ ಎಲೆ, ಬಿಂಬಲಕಾಯಿ ಕಾನು, ಅದರ ಹೆಸರು ಹೇಳಿ ಜಾಣರು?] ಉತ್ತರ:— ಹಸಿ ಶುಂಠಿ.

ಕನ್ನಡ:- ಎಲೆ ಎಲೆ ರಾಮಚಂದ್ರ | ನೆಲದೊಳಗೆ ಏನು ಸುದ್ದಿ|
ಕೊಕ್ಕ್ಯುಂಟು ಕೂಗಲಾರೆ| ರೆಕ್ಕೆಯುಂಟು ಹಾರಲಾರೆ|

(೩) "ದಣ್ಪೊ, ದಣ್ಪ್ಯಾ ವೈಽರಿ ಕುಡಽವು
ಕುಡವಾಽ ವೈಽರಿ ಸಿದ್ದೆ |
ಸಿದ್ದ್ಯಾ ವೈಽರಿ ಗುಡ್ಡೊ
ಗುಡ್ಡ್ಯಾ ವೈಽರಿ ಕರಽಡ
ಕರಽಡಾ ವೈಽರಿ ಗೊರವಽ ಚರತಾತಿ ||"

ಉತ್ತರಃ- ಮನಿಶು.

[ದಣಪೆ, ದಣಪೆ ಮೇಲೆ ಕೊಳಗ, ಕೊಳಗದ ಮೇಲೆ ಸಿದ್ದೆ, ಸಿದ್ದೆಯ ಮೇಲೆ ಗುಡ್ಡ, ಗುಡ್ಡದ ಮೇಲೆ ಕರಡ, ಕರಡದ ಮೇಲೆ ದನ ಮೇಯುತ್ತವೆ.] ಉತ್ತರ:- ಮನುಷ್ಯ.

ಈ ಒಗಟಿನಲ್ಲಿ ದಣಪೆ ಎನ್ನುವದು ಮನುಷ್ಯನ ಎರಡು ಕಾಲು, ಕಾಲಿನ ಮೇಲ್ಭಾಗದಲ್ಲಿ ಕೊಳಗವೇ ಹೊಟ್ಟೆ, ಕೊಳಗದ ಮೇಲೆ ಸಿದ್ದೆಯೇ ಕೊರಳು, ಸಿದ್ದೆಯ (ಕೊರಳಿನ) ಮೇಲೆ ಗುಡ್ಡವೇ ತಲೆ, ತಲೆ (ಗುಡ್ಡ) ಯ ಮೇಲೆ ಕರಡವೇ ತಲೆ ಗೂದಲು— ಇನ್ನು ಈ ಕೂದಲನ್ನು ಮೇಯುವ ದನಗಳೇ— ಹೇನುಗಳು. ಈ ಒಗಟಿಗೆ ಉತ್ತರ "ಮನುಷ್ಯ" ನೆಂದು ಹೇಳಲಾಗಿದೆ. ಈಗ ಸ್ವಲ್ಪ ಇದೇ ರೀತಿ ಹೋಲುವ ಕನ್ನಡ ಒಗಟು ನೋಡಿ—

ಕನ್ನಡ:— ಒಂದು ಖುರ್ಚಿಯ ಮೇಲೆ ಐವರು ಸಹೋದರರು ಕುಳಿತಿರುತ್ತಾರೆ. ಖುರ್ಚಿಯನ್ನು ಎಲ್ಲರೂ ಮುಟ್ಟಿದರೂ ಒಬ್ಬರನ್ನೊಬ್ಬರು ಮುಟ್ಟುವದಿಲ್ಲ.

ಉತ್ತರ:- ಎರಡು ಕಣ್ಣು, ಎರಡು ಕಿವಿ ಮತ್ತು ಒಂದು ಮೂಗು- ಇವೆಲ್ಲ ಕುಳಿತಿರುವ ಖುರ್ಚಿ ತಲೆ.

(೪) "ಹಡ್ಪs, ಹಡ್ಪ್ಯಾ ಭಿತ್ತರಿ ಖಡ್ಪs,
ಖಡ್ಪ್ಯಾ ಭಿತ್ತರಿ ಶಂಖು,
ಶಂಖಾ ಭಿತ್ತರಿ ತೀರ್ಥ"

ಉತ್ತರ:— ನಾರ್ಲ್ಲ

[ಹಡಪ| ಹಡಪದೊಳಗೆ ಕಡಪ| ಕಡಪದೊಳಗೆ ಶಂಖ| ಶಂಖದೊಳಗೆ ನೀರು.] ಉತ್ತರ :- ತೆಂಗಿನಕಾಯಿ

ಇದನ್ನು ಹೋಲುವ ಕನ್ನಡ ಒಗಟು ಹೀಗಿದೆ:
ಅಡಪ ಮುಡಪ ಶಂಖತೀರ್ಥ =ತೆಂಗಿನಕಾಯಿ.

ಕನ್ನಡ:— ಮೂರು ಕಣ್ಣುಂಟು ಹರನಲ್ಲ,
ಒಳಗೆ ನೀರುಂಟು ಬಾವಿಯಲ್ಲ.

ಉತ್ತರ:— ತೆಂಗಿನಕಾಯಿ

(೫) "ಏಕ ಹಕ್ಕಿ ಬಾಲ್ಲಾನs ಉದಾಕs ಪಿತ್ತಾ"

ಉತ್ತರ:— ಚಿಮಣಿ ಬುರ್ದ್ಗೊ.

[ಒಂದು ಪಕ್ಷಿ ಬಾಲದಿಂದ ನೀರು ಕುಡಿಯುತ್ತದೆ.]

ಉತ್ತರ;— ಗುಬ್ಬಿಚಿಮಣಿ

ಸಿಂಪಿ ಲಿಂಗಣ್ಣನವರ 'ಜನಾಂಗದ ಜೀವಾಳ' ಗ್ರಂಥದಲ್ಲಿ "ಬಂಗಾರದ ಗುಬ್ಬಿ ಬಾಲದಲ್ಲಿ ನೀರು ಕುಡಿಯುತ್ತದೆ" ಎಂದು ಹಣತಿ ದೀವಿಗೆಯ ಒಗಟನ್ನು ಹೇಳಿದ್ದಾರೆ. (ಪುಟ ೬೨) ಇಲ್ಲಿ ಕೊಟ್ಟ ಕೊಂಕಣಿ ಒಗಟಿನ "ಹಕ್ಕಿ" ಎಂಬ ಶಬ್ದ ಕನ್ನಡಶಬ್ದ. ಇದು ಕನ್ನಡ ಒಗಟೆಂಬುದು ಸ್ಪಷ್ಟವಿದೆ.

ಕನ್ನಡ:— ಅಂಗೈ ಅಗಲದ ಗದ್ದೆ| ಗದ್ದೆಗೆ ನೀರು|
ನೀರಿಗೆ ಬೇರು| ಬೇರಿಗೆ ಬೆಂಕಿ ||

ಉತ್ತರ:— ಎಣ್ಣೆ ದೀಪ

ಮೇಲ್ಕಾಣಿಸಿದ ಕನ್ನಡ-ಕೊಂಕಣಿ ಭಾಷೆಯ ಒಗಟುಗಳಲ್ಲಿ ಒಂದೇ ವಸ್ತುವನ್ನು ಹೇಗೆ ಬೇರೆ ಬೇರೆ ರೀತಿಯಲ್ಲಿ ಅಭಿವ್ಯಕ್ತಿಸಲಾಗಿದೆ ಎಂಬುದನ್ನು ಪರಿಶೀಲಿಸಬಹುದು.

ಈಗ ಕೊಂಕಣಿಯ ಇನ್ನೂ ಕೆಲವು ಒಗಟುಗಳನು ನೋಡೋಣ :

(೧) "ಬಾಪಾನಿ ದಿಲ್ಲಿಲೆ ಪೈಸೆ,
ಮಾಜು ಕಡೇನು ಲೇಖುಕರೂಕ ಜಾಯ್ನಾ,
ತುಜ ಕಡೇನು ಲೇಖುಕರು ಜಾಯ್ನಾ||"

ಉತ್ತರ:— ನಕ್ಷತ್ರ

ಈ ಒಗಟು ತುಳುವಿನಲ್ಲೂ ಉಂಟು.

ಕನ್ನಡ:— ಅಮ್ಮನ ಸೀರೆ ಮಡಿಸೋಕಾಗಲ್ಲ| ಅಪ್ಪನ ದುಡ್ಡು ಎಣಿಸೋಕಾಗಲ್ಲ||

ಉತ್ತರ:— ಆಕಾಶ, ನಕ್ಷತ್ರ.

(೨) "ಘರಾಂತ ಮಾಕ್ಕಾ ಆಪ್ಡೀಲs ಶಿವ್ಯಾ
ತುಕ್ಕಾ ನೀದs ಪಡsನಾ."

ಉತ್ತರ:— ಬಾಗಿಲು

[ನನ್ನನ್ನು ಮುಟ್ಟದ ಹೊರತು ಮನೆಯಲ್ಲಿ ನಿನಗೆ ನಿದ್ದೆ ಬರುವುದಿಲ್ಲ.]

ಕನ್ನಡ:— ಚಿಕ್ಕ ನಾಯ್ಕನ ಕುದುರೆ ನೂಕಿದಲ್ಲದೆ ಹೋಗದು.

ಉತ್ತರ:— ಬಾಗಿಲು

(೩) "ಚುನ್ನೊ ಕಾಡೀಲೆ ಘರs
ವಚ್ಚ್ಯಾಕ್ ವಾಟ್ನಾ."

ಉತ್ತರ:— ತಾಂತಿ. (ತಾತs)

[ಸುಣ್ಣ ತೆಗೆದ ಮನೆ। ಹೋಗಲು ದಾರಿಯಿಲ್ಲ.]

ಕನ್ನಡ:— ಸುತ್ತ ಸುಣ್ಣದ ಗೋಡೆ। ಎತ್ತ ನೋಡಿದರೂ
ಬಾಗಿಲೇ ಇಲ್ಲ. ಉತ್ತರ:— ತತ್ತಿ

ಮೇಲೆ ಕೊಟ್ಟ ಒಗಟುಗಳಲ್ಲಿ ಆಕಾಶ, ನಕ್ಷತ್ರ, ಬಾಗಿಲು, ತತ್ತಿ— ಇತ್ಯಾದಿ ಇನ್ನೂ ಅನೇಕ ವಸ್ತುಗಳನ್ನು ಹೇಳುವ ಒಗಟುಗಳು ಕೊಂಕಣಿಯಲ್ಲಿ ದೊರೆಯುತ್ತವೆ. ಇದೇ ರೀತಿಯಾಗಿ ಹೇಳಿದ ಒಗಟುಗಳು (ಅಭಿವ್ಯಕ್ತಿಯಲ್ಲಿ ಕೂಡ) ಕನ್ನಡದಲ್ಲಿವೆ ಎಂಬುದನ್ನು ತೋರಿಸಲು ಮೂರು ಉದಾಹರಣೆ ಗಳನ್ನು ಮಾತ್ರ ಕೊಡಲಾಗಿದೆ. ಇಂಥ ನೂರಾರು ಒಗಟು ಗಳು ಕನ್ನಡದಿಂದ ಕೊಂಕಣಿಗೆ ಹೋಗಿವೆ.

ಈ ರೀತಿ ಕೊಂಕಣಿಯು ಮೇಲೆ ಕನ್ನಡದ ಪ್ರಭಾವವಾದರೂ, ಕೊಂಕಣಿ ಭಾಷೆಗೇ ವಿಶಿಷ್ಟವಾದ ಒಗಟುಗಳು ಆ ಭಾಷೆಯಲ್ಲಿ ಇಲ್ಲದಿಲ್ಲ. ಕೆಳಗೆ ಕಾಣಿಸಲಾದ ಉದಾಹರಣೆಗಳು ಈ ಸಂಗತಿಯನ್ನು ದೃಢಪಡಿಸುತ್ತವೆ :

(೧) "ಸರs ಸರs ವಾಲಿ
ಸ್ವರ್ಗಾರs ಗೆಲ್ಲಿ ಆವೈs ಮೆಲ್ಲಿ|
ದೂವs ಬಾಯ್ರು ಸರಲೀ||"

ಉತ್ತರ:— ಮಂಜುಟಿ (ಗುಲಗುಂಜಿ.)

[ಸರ ಸರ ಬಳ್ಳಿ| ಸ್ವರ್ಗಕ್ಕೇರಿತು| ತಾಯಿ ತೀರಿದಳು| ಮಗಳು ಹೊರಬಿದ್ದಳು.] ಉತ್ತರ:— ಗುಲಗುಂಜಿ.

(೨) "ಘಾಟಾರs ಸಾನು ತೀನಿ ಕಲsವಂತs ಆಯ್ಲೆ|
ಏಕs ತಳ್ಯಾಂತ್ತು ಗೆಲೆ| ಏಕ ರುಕಾರಿ ಗೆಲೆ|
ಏಕ ಹಿಂಡಾಂತು ಗೆಲೆ."||

[ಘಟ್ಟದ ಮೇಲಿಂದ ಮೂವರು 'ಕಲಾವಂತೆ'ಯರು ಬಂದರು. ಒಂದು ತಳಕ್ಕೆ ಹೋಯಿತು, ಒಂದು ಮರವೇರಿತು, ಮತ್ತೊಂದು ಹಿಂಡಿನಲ್ಲಿ ಅಡಗಿತು.]

ಉತ್ತರ:— ಕಮಲ, ಸಂಪಿಗೆ ಹಾಗೂ ಕೇತಕಿ– ಈ ಮೂರು ಹೂವುಗಳೇ ಆ 'ಕಲಾವಂತೆ'ಯರು.

(೩) "ಆಜ್ಜೊ ಬಸ್ಲೊ, ಪೂತು ಜೊಡ್ಡಾ ಗೆಲ್ಲೊ;
ಆನಿ ನಾತ್ವಾಸs ಖರ್ಚೊನs ಉಡ್ಕೆಲೆ."

[ಅಜ್ಜ ಕುಳಿತಿರುತ್ತಾನೆ. ಮಗ ದುಡಿಯುತ್ತಾನೆ. ಮೊಮ್ಮಗ ಖರ್ಚು ಮಾಡುತ್ತಾನೆ.]

ಉತ್ತರ:— ನೀರಿನ ಹಂಡೆ, ಕೊಡ ಹಾಗೂ ತಂಬಿಗೆಗಳು.

ಈ ಒಗಟಿನ ಹಿಂದೆ ಅಪಾರವಾದ ಲೋಕಾನುಭವ ಅಡಗಿದೆ. ದುಡಿದು, ದುಡಿದು ಹಣ್ಣಾದ ಅಜ್ಜ ವಿಶ್ರಾಂತಿ ಪಡೆದರೆ ಮಗ ದುಡಿಯುತ್ತಾನೆ. ಮುಂದೆ ಈ ಮೊಮ್ಮಗ ಅಜ್ಜನಾದಾಗ, ಅವನ ಮಗ ದುಡಿಯುತ್ತಾನೆ. ಮತ್ತೊಬ್ಬ ಮೊಮ್ಮಗ– ಖರ್ಚು ಮಾಡಲು ಹುಟ್ಟಿಕೊಳ್ಳುತ್ತಾನೆ. ಹಂಡೆ, ಕೊಡ ಹಾಗೂ ತಂಬಿಗೆಗಳ ಪ್ರತಿಮೆಗಳ ಮೂಲಕ ಧ್ವನಿತವಾದ ಅರ್ಥವನ್ನು ಪರಿಭಾವಿಸಿದಷ್ಟು ಅದು ಬುದ್ಧಿಗೆ ಚಾಲನೆ ಕೊಡುತ್ತ ಹೋಗುತ್ತದೆ.

(೪) "ಏಕs ಆಂಬೊ, ಪಾಂಚ ಲೋಕಾಕs ಮೆಳ್ತಾ,
ಬತ್ತೀಸ್s ಲೋಕ ಖಾತ್ತಾಚಿ, ಏಕ್ಟ್ಯಾಕs
ರುಚಿ ಕsಳ್ತಾ."

[ಒಂದು ಮಾವಿನಹಣ್ಣು – ಐವರಿಗೆ ಸಿಗುತ್ತದೆ, ಮೂವತ್ತೆರಡು ಜನರು ತಿನ್ನುತ್ತಾರೆ, ಒಬ್ಬನಿಗೆ ಮಾತ್ರ ರುಚಿ ತಿಳಿಯುತ್ತದೆ.]

ಉತ್ತರ:— ಕೈಬೆರಳು, ಹಲ್ಲುಗಳು ಮತ್ತು ನಾಲಿಗೆ.

(೫) "ಮುಕಾರಿ ಬಸ್ಲಾ ಟೊಪ್ಪಿ ಭಟ್ಟು,
ಮಾಕ್ಷಾನs ಆಸಾಚಿ ಪಾಂಯುಶಿ ಲೋಕು."

"ತಾಂಬ್ಡೆ ತೊಂಡಾ ಸಾಯ್ಬು।
ಪಾಟ್ಲೆಸ ವಟ್ಟು ಚಿಯ್ಡುs"

[ಮುಂದೆ ಕುಳಿತಿದ್ದಾನೆ ಟೊಪ್ಪಿಗೆ ಭಟ್ಟ. ಹಿಂದುಗಡೆ ಇದ್ದಾರೆ ಐನೂರು ಮಂದಿ. ಕೆಂಪು ಮೂತಿ ಸಾಹೇಬ, ಅವನ ಹಿಂದೆಲ್ಲ ಮಕ್ಕಳೇ ಮಕ್ಕಳು.]

ಈ ಎರಡೂ ಒಂದೇ ಅರ್ಥದ ಒಗಟುಗಳು.

ಉತ್ತರ :— ಬಾಳೆಗೊನೆ

(೬) "ಏಕ ರುಕಾಕs
ಮಾಣsಯೋ–ಮಾಣsಯೋ."

[ಒಂದು ಮರಕ್ಕೆ ಬರೇ ಮಣೆಗಳೇ ಮಣೆಗಳು.]

ಉತ್ತರ :— ಬಾಳೆಮರ

(೭) "ಹೂನs ಹೂನs ಪಾಂಚs
ಶೇಳೆ ಹೂನs ಪಾಂಚs
ಮಾಕ್ಕಾ ಪಾಂಚ, ತುಕ್ಕಾ ಪಾಂಚs"

[ಬಿಸಿ ಬಿಸಿ ಐದು, ತಂಪು – ಬಿಸಿ ಐದು, ನನಗೈದು ನಿನಗೈದು.]

ಈ ಒಗಟಿಗೆ "ಸುಖ–ದುಃಖ" ಅಥವಾ "ಸತಿ–ಪತಿ" ಯರು ಎಂಬ ಸಾಂಕೇತಿಕ ಉತ್ತರ ಹೇಳುತ್ತಾರೆ. ಗಹನವಾದ ತತ್ತ್ವವಿಚಾರಗಳೂ ಕೊಂಕಣಿ 'ಒಗಟು'ಗಳಲ್ಲಿವೆ ಎಂಬುದಕ್ಕೆ ಇದೊಂದು ಉದಾಹರಣೆ ಮಾತ್ರ.

(೮) "ಆಮ್ಗೆಲೆ ಘರ್ಚ್ಯಾ ದೇವಾಕ್ ಮೂಸ್
ಆಪ್ಡಿನಾಚಿ."

[ನಮ್ಮ ಮನೆದೇವರನ್ನು ನೊಣಗಳು ಮುಟ್ಟುವದಿಲ್ಲ.]

ಉತ್ತರ:— ಬೆಂಕಿ

(೯) "ದಿವ್ಸಾಕ್ ಕಳೋ, ರಾತ್ರೀಕ್ ಫೂಲ್."

[ಹಗಲಿನಲ್ಲಿ ಮೊಗ್ಗು, ರಾತ್ರಿಯಲ್ಲಿ ಹೂವು.]

ಉತ್ತರ:— ಹಾಸಿಗೆ

(೧೦) "ಆತ್ತ್ ಜಾಲಿಲೆ ಬಾಳ್ಸಿ, ಮಾತ್ತಿ ಕಾಮ
ಕರ್ತಾ."

[ಈಗ ತಾನೇ ಹುಟ್ಟಿದ ಮಗು, ಮಣ್ಣಿನ ಕೆಲಸ ಮಾಡುತ್ತದೆ.]

ಉತ್ತರ:— ಒರಲೆ

'ಅಗುಳಿನಿಂದ ಅನ್ನದ ಪರೀಕ್ಷೆ'ಯೆಂಬಂತೆ, ಕೊಂಕಣಿ ಭಾಷೆಗೆ ವಿಶಿಷ್ಟವಾದ ಕೆಲವೊಂದು ಒಗಟುಗಳನ್ನು, ಅವುಗಳ ಕನ್ನಡಾನುವಾದವನ್ನೂ ಮೇಲೆ ಕೊಡಲಾಗಿದೆ. ಇಂಥ ಸಾವಿರಾರು–ಲಕ್ಷಾವಧಿ ಒಗಟುಗಳು ಕೊಂಕಣಿಯಲ್ಲಿವೆ. ಅವುಗಳನ್ನು ವ್ಯವಸ್ಥಿತವಾಗಿ ಸಂಗ್ರಹಿಸುವವರು ಈಗ ಮುಂದೆ ಬರಬೇಕಾಗಿದೆ.

ಒಟ್ಟಿನಲ್ಲಿ ಇಷ್ಟು ಹೇಳಬಹುದು; ಕೊಂಕಣಿ–ಕನ್ನಡ ಸಂಬಂಧ ಶತಮಾನಗಳಿಂದ ನಡೆದು ಬಂದದ್ದು. ಆದ್ದರಿಂದ ಕೊಂಕಣಿಯಲ್ಲಿಂದು ನಾವು ಅನೇಕ ಕನ್ನಡ ಒಗಟುಗಳು ಅನಾಮತ್ತಾಗಿ ಬಂದು ಸೇರಿದ್ದನ್ನು ಕಾಣುತ್ತೇವೆ. ಕನ್ನಡದ ಎಲ್ಲ

ಒಗಟುಗಳನ್ನು ಬೇರ್ಪಡಿಸಿ ನೋಡಿದರೂ, ಕೊಂಕಣಿಯಲ್ಲಿ ತನ್ನದೇ ಆದ ಸ್ವಂತಿಕೆಯ ಸಾವಿರಾರು ಒಗಟುಗಳ ಭಂಡಾರ ಇದೆ. ಅವುಗಳನ್ನು ಕೊಂಕಣಿಗರು ಬೆಳೆಸಿಕೊಂಡು ಬಂದಿದ್ದಾರೆ.

೫. ಕನ್ನಡ ಕೊಂಕಣಿ ಗಾದೆಗಳು

ಬದುಕಿನ ಅನಂತಮುಖವಾದ ಅನುಭವವನ್ನು ಮನುಷ್ಯ ಹಲವಾರು ರೀತಿಗಳಲ್ಲಿ ಅಭಿವ್ಯಕ್ತ ಮಾಡುತ್ತಾನೆ. ಸಾಹಿತ್ಯ ದಲ್ಲಿ ಕೂಡ–ಅಂತೆಯೇ ಜನಪದ ಸಾಹಿತ್ಯದಲ್ಲಿ– ಈ ಅನುಭವ ಅನೇಕ ವಿಧವಾಗಿ ಬಂದಿದೆ. ಒಗಟುಗಳು ಬುದ್ಧಿಗೆ ಸಾಣೆ ಹಿಡಿ ಯುವ ಕೆಲಸ ಮಾಡಿ, ಬದುಕಿನ ಗಹನ ಸಮಸ್ಯೆಗಳತ್ತ ಬೆರಳು ತೋರುತ್ತವೆ. ಈ ಒಗಟುಗಳ ಗರಡಿಯಲ್ಲಿ ಉತ್ತೀರ್ಣ ನಾದವನು ಬದುಕಿನ ಯಾವ ಸಮಸ್ಯೆಯನ್ನಾದರೂ ಸಲೀಸಾಗಿ ಬಿಡಿಸುವ ಸಾಮರ್ಥ್ಯ ಪಡೆಯಬಲ್ಲವನಾಗುತ್ತಾನೆ. ಈ ಬಗೆಯ ಸಾಹಿತ್ಯದಲ್ಲಿ ಒಗಟುಗಳು ಬುದ್ಧಿಗೆ ಚಾಲನೆ ಕೊಟ್ಟರೆ, ಗಾದೆಗಳೋ ಬದುಕಿನ ಅನಂತಮುಖವಾದ ಅನುಭವವನ್ನು ಕಿರುನುಡಿಗಳಲ್ಲಿ ಹಿಡಿದಿಡುತ್ತವೆ. ಗಾದೆಯೆಂದರೇನು? ಅದರ ಸ್ವರೂಪ–ಲಕ್ಷಣಗಳೇನು? ವ್ಯಾಪ್ತಿಯೇನು?— ಮೊದಲಾದ ಸಂಗತಿಗಳನ್ನು ವಿವರಿಸುವ ಗ್ರಂಥಗಳು ಈಗ ಕನ್ನಡದಲ್ಲಿ ಸಾಕಷ್ಟು ಬರುತ್ತಲಿವೆ. ಈ ಪರಿಶೀಲನೆಯಲ್ಲಿ ಕನ್ನಡ ಹಾಗೂ ಕೊಂಕಣಿ ಭಾಷೆಗಳ ಗಾದೆಗಳನ್ನು ಉದಾಹರಿಸಿ, ಅವುಗಳಲ್ಲಿ ಅಭಿವ್ಯಕ್ತವಾದ ಅನುಭವ, ಭಾಷೆಯ ಸೊಗಸುಗಳನ್ನು ಅರಿಯಲು ಪ್ರಯತ್ನಿಸಲಾಗಿದೆ.

ಕನ್ನಡದಲ್ಲಿ 'ಗಾದೆ'ಯೆಂದು ಕರೆಯಲಾಗುವ ಸಾಹಿತ್ಯ ಪ್ರಕಾರವನ್ನು ಕೊಂಕಣಿ ಭಾಷೆಯಲ್ಲಿ "ಮ್ಹಣ್ಣೀ" (ಅಥವಾ ಆದs ಗತs) ಎಂದು ಕರೆಯುತ್ತಾರೆ. ಶ್ರೀ ತಾಳಮಕ್ಕಿಯವರು ಇಂಗ್ಲೀಷಿನಲ್ಲಿ ಬರೆದ ಕೊಂಕಣಿ 'ಗಾದೆ ಹಾಗೂ ಒಗಟು'ಗಳ ಗ್ರಂಥವೇ ಈ ವರೆಗೆ ಗಾದೆಗಳ ಕುರಿತು ನಾನು ನೋಡಿದ್ದು. (ಗೋವಾ ಕಡೆಯ ಗಾದೆಗಳನ್ನು ಇನ್ನೂ ಪರಿಶೀಲಿಸಬೇಕಾಗಿದೆ.)

ಪ್ರಾಚಾರ್ಯ ಆರ್. ವಾಯ್. ಧಾರವಾಡಕರರು ತಮ್ಮ "ಕನ್ನಡ ಭಾಷಾಶಾಸ್ತ್ರ" ಎಂಬ ಗ್ರಂಥದಲ್ಲಿ ಈ ಕೆಲವು ಮಾತುಗಳನ್ನು ಹೇಳಿದ್ದಾರೆ: ಕೊಂಕಣಿಯ ಮೇಲಾದ ಕನ್ನಡದ ಪ್ರಭಾವವನ್ನು ಮೂರು ವಿಧವಾಗಿ ವಿಭಾಗಿಸಬಹುದು. ೧. ಕೊಂಕಣಿಯಲ್ಲಿ ಸೇರಿದ ಅನೇಕ ಕನ್ನಡ ಪದಗಳು ಹಾಗೂ ಗಾದೆಯ ಮಾತುಗಳು. ೨. ಮಕ್ಕಳನ್ನು ಆಡಿಸುವಾಗ ಸಾರಸ್ವತ ಸ್ತ್ರೀಯರು ನೇರವಾಗಿ ಉಪಯೋಗಿಸುವ ಶುದ್ಧ ಕನ್ನಡ ಪದ್ಯಗಳು. ೩. ಮೂರನೆಯದಾಗಿ ಕೊಂಕಣಿ ವ್ಯಾಕರಣದ ಮೇಲೆ ಕನ್ನಡವು ಮಾಡಿರಬಹುದಾದ ಪರಿಣಾಮ.

ಅವರು ಈ ರೀತಿಯ ಪರಿಶೀಲನೆ ಮಾಡುವಾಗ ಕೊನೆಯಲ್ಲಿ– "ನಾವು ಮೇಲೆ ಆಧಾರವಾಗಿ ತೆಗೆದುಕೊಂಡ ಕೊಂಕಣಿಯಲ್ಲಿ ಬಹುಶಃ ಒಂದು ಭಾಗದ ಕೊಂಕಣಿಯನ್ನೇ ಹೆಚ್ಚಾಗಿ ತೆಗೆದುಕೊಂಡಿದ್ದೇವೆ. ಇದನ್ನು ಬಿಟ್ಟುಳಿದ ಕೊಂಕಣಿ ಭಾಷೆಯಲ್ಲಿ ಬೇರೆ ವಿಧದ ಪ್ರಭಾವಗಳನ್ನು ಕಾಣಬಹುದು. ಆದರೆ 'ಕೊಂಕಣಿ'ಯೆಂದೆನಿಸಿಕೊಂಡ ಒಂದು ಬಗೆಯ ಭಾಷೆಯಾದರೂ ಈ ರೀತಿಯ ಕನ್ನಡ ಸಂಪರ್ಕಕ್ಕೆ ಒಳಗಾಗಿದ್ದರೆ, ಈ ಎರಡು

ಭಾಷೆಗಳಿಗಿರುವ ಪ್ರಾಚೀನ ಕಾಲದ ಸಂಬಂಧ-ಸಂಪರ್ಕಗಳನ್ನು ಕಾಣಬಹುದಾಗಿದೆ"— ಎಂದು ಹೇಳಿದ್ದಾರೆ. ತಮ್ಮ ಈ ಮಾತುಗಳ ಸಮರ್ಥನೆಗಾಗಿ ಅವರು ಅವಲಂಬಿಸಿದ್ದು ಶ್ರೀ ತಾಳಮಕ್ಕಿಯವರು ಬರೆದ ಗ್ರಂಥ. ಬಹುಶಃ ಅವರಿಗೆ ಆ ಗ್ರಂಥದಲ್ಲಿ ಅಚ್ಚ ಕೊಂಕಣಿಯ— ವಾತಾವರಣವಿರುವ 'ಗಾದೆಗಳು' ದೊರೆತಿರಲಿಕ್ಕಿಲ್ಲ.

ಈಗ ನಾನು ಸಂಗ್ರಹಿಸಿದ ಸುಮಾರು ೫೦೦ಕ್ಕೂ ಹೆಚ್ಚು ಕೊಂಕಣಿ ಗಾದೆಗಳಲ್ಲಿ- ಕೊಂಕಣಿಯವೇ ಆದ— ಕೆಲವೊಂದು ಗಾದೆಗಳನ್ನು ಉದಾಹರಿಸಿ, ಜೊತೆಗೆ ಅವುಗಳ ಕನ್ನಡ ರೂಪಾಂತರವನ್ನೂ, ಶಕ್ಯವಿದ್ದಲ್ಲಿ ಆ ಗಾದೆಗೆ ಕನ್ನಡದ ಶೀರ ಹತ್ತಿರದ ಗಾದೆಯ ಉದಾಹರಣೆಯನ್ನೂ ಕೊಡಲು ಪ್ರಯತ್ನಿಸಿದ್ದೇನೆ.

ಈ ಕೆಳಗಿನ ಕೊಂಕಣಿ ಗಾದೆಗಳನ್ನು ನೋಡಿ:—

೧) "ಉದಕಾರಿ ಬಡ್ಡಿ ಮಾರ್ಲ್ಯಾರಿ ಗೋವs ಬಾಯ್ಲs ಏಕ್ಕsಚಿ."

(ನೀರಿನ ಮೇಲೆ ಬಡಿಗೆಯಿಂದ ಹೊಡೆದಂತೆ, ಗಂಡ-ಹೆಂಡಿರೊಂದೇ.)

೨) "ಆಶ್ಶಿಲೆ ಸೊಡ್ಚೆ, ನಾಶ್ಶಿಲೆ ಧೊರ್ಚೆ"

(ಇದ್ದದ್ದು ಬಿಡುವದು, ಇಲ್ಲದ್ದನ್ನು ಹಿಡಿಯುವದು.)

ಕನ್ನಡ:- ಎಲ್ಲಾ ಬಿಟ್ಟ, ಭಂಗೀ ನೆಟ್ಟ!

೩) "ಗೋರು ನಿಪ್ಪಯ್ಲ್ಲೆ ವ್ಹಣು, ಗೊಟ್ಪೊ ನಿಪ್ಪsವ್ನಕಾ"
(ದನವನ್ನು ಅಡಗಿಸಿಡಬಹುದು; ಆದರೆ ಕೊಟ್ಟಿಗೆಯನ್ನಲ್ಲ.)

೪) "ತಾಟ್ಟಾರs ಸೂಪs ಶೆಣಾನs ಗಟ್ಟಿ, ಮಾಂಥಾರೋ ಮನಿಶು ಖಾಣಾನs ಗಟ್ಟಿ."
(ತಟ್ಟು ಗೆರಸಿಗೆ ಸಗಣಿ ಹೆಚ್ಚು; ಮುದುಕ ಮನುಷ್ಯ ತಿನ್ನಲಿಕ್ಕೆ ಗಟ್ಟಿ.)

೫) "ಹೊಡ್ಲೆ ಮಾಂಥಾಲೆ ವರ್ಷೀಕ, ಸಾಂಗ್ಚಾ ಗೆಲ್ಯಾರಿ ಅಳ್ಳೀಕ"
(ದೊಡ್ಡಪ್ಪನ ಶ್ರಾದ್ಧ, ಹೇಳಲಿಕ್ಕೆ ಹೋದರೆ ಬಹಳ ಕಷ್ಟ.) [ಹೊಲಸು].

೬) "ಹಾಥಾ ಕಾಂಕ್ಣಾಕs ಆರಶಿ ನಾಕ್ಕಾ, ಮಡಿವಾಳಾಲೆ ಚರಡಾಕs ಬಾರ್ಸೊ ನಾಕ್ಕಾ".
(ಕೈಬಳೆ ನೋಡಲು ಕನ್ನಡಿ ಬೇಡ, ಮಡಿವಾಳನ ಮಗನಿಗೆ 'ಮಡಿ' ವಸ್ತ್ರ ಬೇಡ.)

೭) "ಸೊನಾರಾಲೋ ಮಾಸೋ, ದಳತಲ್ಯಾಲೋ ಪೊಸೋ, ಶಿಂಪ್ಯಾಲೋ ಕಿಸೋ."
(ಅಕ್ಕಸಾಲಿಯ ತೂಕದ ಕಲ್ಲು, ಬೀಸುವವನ (ರಾಗಿಕಲ್ಲು) ಮುಷ್ಟಿ, ದರ್ಜಿಯ ಕಿಸೆ– ಈ ಮೂರನ್ನು ನಂಬಬೇಡ.)

೮) "ಗೋವಿಂದ ಪೈಲಿ ಗಾಯಿ, ವಾಟs ಆಡsಯ್ತಾ."
(ಗೋವಿಂದ ಪೈಗಳ ದನ, ದಾರಿ ಅಡ್ಡಗಟ್ಟುತ್ತದೆ.)
ಇಲ್ಲಿ 'ಬಲರಾಮನ ದನ'ದ ನೆನಪೂ ಬರುತ್ತಿದೆ.

೯) "ಬಾಯ್ಲೇಕ ಏಕ ಗೋವು, ಗೋವಾಕs ಏಕs ಬಾಯ್ಲs"
(ಗಂಡನಿಗೊಬ್ಬ ಹೆಂಡತಿ, ಹೆಂಡತಿಗೊಬ್ಬ ಗಂಡ)

೧೦) "ದಾಂತ್ಯಾತುಲೆ ರಡsತನಾ, ಸೂಪಾಂತುಲೆ ಹಾಸ್ತಾ."
(ರಾಗಿಕಲ್ಲಿನೊಳಗಿನದು (ಧಾನ್ಯ) ಅಳುವಾಗ, ಗೆರಸಿಯಲ್ಲಿದ್ದದ್ದು (ಕಾಳು) ನಗುತ್ತದೆ.)

೧೧) "ತೂಪs ಗಾಲ್ಲಿಲ್ಯಾ ಆಯ್ದsನಾಕs ನಯs ವತsನಾ"
(ತುಪ್ಪ ಹಾಕಿದ ಪಾತ್ರೆಯ ನಯ (ಜಿಡ್ಡು) ಹೋಗುವುದಿಲ್ಲ.)

೧೨) "ಹೂನ ಪೇಜೇಕs ತೂಪs ನಾಕಾ, ಧಾಕಟ ಬಾಯ್ಲೇಕs ರೂಪs ನಾಕಾ."
(ಬಿಸಿ ಗಂಜಿಗೆ ತುಪ್ಪ ಬೇಡ; ಎರಡನೇ ಹೆಂಡತಿಗೆ ರೂಪ ಬೇಡ.)

೧೩) "ದೋಣಿ ಭರ್ಚ್ಯಾಕs ಗೆಲ್ಲಿಲೊ ಆಯ್ಲೊ, ಪೋಟs ಭರ್ಚ್ಯಾಕs ಗೆಲ್ಲಿಲೋ ಆಯ್ಲೋ ನಾ."
(ದೋಣಿ ತುಂಬಲು ಹೋದವ ಬಂದ, ಆದರೆ ಹೊಟ್ಟೆ ತುಂಬಲು ಹೋದವ ಬರಲಿಲ್ಲ.)

ಇದು ಕನ್ನಡದಲ್ಲೂ ಇದೆ.

೧೪) "ಧರಿಯಾಂತ ಆಸಾ ಮಾಸೋ, (ಮೋಲs) ಮೋಲ ಕರತಾ ಪಿಸೋ"

(ಮೀನ ಸಮುದ್ರದಲ್ಲಿದೆ; ಬೆಲೆ ಕಟ್ಟುತ್ತಾನೆ ಹುಚ್ಚ.)

೧೫) "ಹಜಾರ ಜಣs ವೈಜಿಣ್ಯೊ, ಬಾಳಾಂತಿಣಿಲೊ ಕುಚಮಣಿ."

(ಸಾವಿರ ಸೂಲಗಿತ್ತಿಯರು 'ಬಾಳಂತಿ'ಯನ್ನು ಕೆಡಿಸಿದರು.)

೧೬) "ಮಾಳಪ್ಪ ಪೈಕs ಜೋರು ಜಾಲ್ಯಾರಿ ಸಂಗ್ರಾಮಾಕ (ಸಂಭ್ರಮಾಕs) ಪೇಜವೇ ?"

(ಮಾಳಪ್ಪ ಪೈಗಳಿಗೆ ಜ್ವರ ಬಂದರೆ, ಎಲ್ಲರಿಗೂ ಗಂಜಿಯೇ?)

ಮೇಲೆ ಉದಾಹರಿಸಿದ ಗಾದೆಗಳಲ್ಲಿ ಅಲ್ಲಲ್ಲಿ ಕೊಂಕಣಿ ಸಂಸ್ಕೃತಿಯ ಹೆಜ್ಜೆಗಳನ್ನು ಗುರುತಿಸಬಹುದು. ಮೇಲಿನ ಉದಾಹರಣೆಗಳಲ್ಲಿ ಬರುವ ಅಕ್ಕಸಾಲಿ, ಸಿಂಪಿಗರ ಅನುಭವ ಸರ್ವವ್ಯಾಪಿಯಾದದ್ದು- 'ಗೋವಿಂದ ಪೈಲಿ ಗಾsಯಿ' ಎನ್ನುವಲ್ಲಿ ಬರುವ ತತ್ಕಾಲೀನ ಘಟನೆ, 'ದೋಣಿ ತುಂಬಲು ಹೋದವನು ಬಂದ, ಹೊಟ್ಟೆ ತುಂಬಲು ಹೋದವ ಬರಲಿಲ್ಲ' ಎಂಬಲ್ಲಿಯ ವ್ಯವಸಾಯ ಸಂಬಂಧ ಹಾಗೂ ಲೋಕಾನುಭವ; 'ಧರಿಯಾಂತs ಆಸಾ ಮಾಸೋ'- ಎಂದು ಸಮುದ್ರದಲ್ಲಿರುವ ಮೀನುಗಳ ಬೆಲೆ ಕಟ್ಟುವಲ್ಲಿನ ಹೆಡ್ಡತನ, 'ಮಾಳಪ್ಪ ಪೈಗಳಿಗೆ ಜ್ವರ ಬಂದರೆ, ಊರ ಜನರಿಗೆಲ್ಲ ಗಂಜಿಯೇ?' - ಎಂಬಲ್ಲಿ ನಡೆಯುವ ವ್ಯಕ್ತಿಪೂಜೆ (ಚಕ್ರವರ್ತಿಗೆ ನೆಗಡಿಯಾದರೆ ರಶ್ಯವೆಲ್ಲ ಸೀನುತ್ತದೆ ಎಂಬ ರಶ್ಯನ ಗಾದೆಯಂತೆ)— ಇವುಗಳೇ ಅಲ್ಲದೆ ಉಳಿದ

ಗಾದೆಗಳಲ್ಲಿನ ಸ್ವಂತಿಕೆ ಇವು ಅಚ್ಚ ಕೊಂಕಣಿ ವಾತಾವರಣದಲ್ಲಿ ಹುಟ್ಟಿದವುಗಳೆಂಬುದನ್ನು ದೃಢಪಡಿಸುತ್ತವೆ. ಕಾರವಾರ ಜಿಲ್ಲೆಯಲ್ಲಿಯ ಕನ್ನಡಿಗರ ಪ್ರತಿನಿತ್ಯದ ವ್ಯವಹಾರದಲ್ಲಿ ಇಂಥ ಕೆಲವು ಕೊಂಕಣಿ ಗಾದೆಗಳು ಕೇಳಬಂದರೆ ಆಶ್ಚರ್ಯವಲ್ಲ.

ನಾವು ಕಾಣುವ ಸಾಮಾನ್ಯ ವಸ್ತುಗಳಲ್ಲಿ ಕೂಡ ಗ್ರಾಮೀಣರು ಬಾಳಿದ ಅನುಭವವನ್ನು ಸೆರೆಹಿಡಿಯುವ ಕಲೆ ಅಸಾಧಾರಣವಾದುದು. 'ಹೊಡ್ಲೆ ಮಾಂಥಾಲೆ ವರ್ಷೀಕ, ಸಾಂಗ್ಚಾ ಗೆಲ್ಯಾರಿ ಅಳ್ಶೀಕ'– ಎನ್ನುವಲ್ಲಿ ಕುಟುಂಬದ ಯಜಮಾನನಾದ ದೊಡ್ಡಪ್ಪನು ಮಾಡಿದ ಪ್ರಮಾದದ ಫಲವಾಗಿ ಇಡಿಯ ಕುಟುಂಬವೇ ಅನುಭವಿಸಬೇಕಾದ ಸ್ಥಿತಿಯನ್ನು ಹೇಳಿದೆ. ಅದು ಪುನಃ ನೆನಪಾಗುವದು ದೊಡ್ಡಪ್ಪನ ಶ್ರಾದ್ಧದ ದಿನ. ಈ ಮಾತು ನಮ್ಮ ದೇಶದ ಸ್ಥಿತಿಗಳಿಗನುಗುಣವಾಗಿ ನಮ್ಮ ಎಷ್ಟು ಮುಂದಿ ನಾಯಕರುಗಳಿಗೆ ಅನ್ವಯಿಸುವದಿಲ್ಲ? ಅಂತೆಯೇ ಅವರು ಮಾಡಿದ 'ಕರ್ಮಫಲ'ದ ನೆನಪು ಅವರ ಶ್ರಾದ್ಧದ ದಿನ ನೆನಪಾಗುತ್ತದೆ ಎನ್ನುತ್ತದೆ ಈ ಕೊಂಕಣಿ ಗಾದೆ.

ಈಗ ಒಂದೇ ಅನುಭವವನ್ನು ಈ ಎರಡೂ ಭಾಷೆಗಳಲ್ಲಿ ಹೇಗೆ ತಮ್ಮ ಪರಿಸರಕ್ಕನುಸರಿಸಿ, ಭಿನ್ನ ಭಿನ್ನ ರೀತಿಯಲ್ಲಿ ವ್ಯಕ್ತಪಡಿಸಲಾಗಿದೆ ಎಂಬುದು ಈ ಕೆಳಗಿನ ಕೊಂಕಣಿ–ಕನ್ನಡ ಗಾದೆಗಳಿಂದ ವಿದಿತವಾಗುವದು. ಈ ಎರಡೂ ಭಾಷೆಗಳಲ್ಲಿ ಹೇಳುವ ರೀತಿ ಬದಲಾಗಿ ಕಂಡರೂ, ಒಳಗಿನ ತಿರುಳು (ಅನುಭವ)ಒಂದೇ ಎಂಬುದನ್ನು ಮರೆಯಬಾರದು. ಒಂದೇ ಅನುಭವವನ್ನು

ಹೇಳುವಾಗ ಅವರು ಬಳಸಿದ ಪ್ರಾಸ, ಅನುಪ್ರಾಸ, ಯಮಕ, ಅಲಂಕಾರ, ಉಪಮೆ, ರೂಪಕ, ಪ್ರತಿಮೆ, ಸಂಕೇತಗಳು ಈ ಎರಡೂ ಭಾಷೆಗಳಲ್ಲಿನ ಭಾಷೆಯ ಸೊಗಸು, ಕಸುವು ಹಾಗೂ ಸಾಧ್ಯತೆಗಳನ್ನು ತೋರಬಲ್ಲವು. ಈ ರೀತಿಯ ತೌಲನಿಕ ಅಧ್ಯಯನದಿಂದ ಈ ಎರಡೂ ಭಾಷೆಗಳು ಪರಸ್ಪರ ಜ್ಞಾನವನ್ನು ಹಂಚಿಕೊಳ್ಳಬಹುದಾಗಿದೆ. ಈ ಕೆಳಗಿನ ಕೊಂಕಣಿ ಕನ್ನಡ ಗಾದೆಗಳ ಉದಾಹರಣೆಗಳನ್ನು ಗಮನಿಸಿ:—

೧. "ನಾಂಗಟಾನs ವಚಾಕ ಕುರಾಡಿ ಘೆತ್ಲಾ"
(ಉಗುರಿನಿಂದ ಹೋಗುವದಕ್ಕೆ ಕೊಡಲಿ ತೆಗೆದುಕೊಂಡ.)

ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ,

೨. "ಆಮುಶಿ ಖಾಲ್ಲಿಲ್ಯಾಕ ತಾಳ್ಯಾಂತs ಲಾಸ್ತಾ"
(ಹುಳಿ ತಿಂದವನ ಕೊರಳು ಉರಿಯುತ್ತದೆ,)

ಕಳ್ಳನಮನಸ್ಸು ಹುಳ್ಳ ಹುಳ್ಳಗೆ,

೩. "ಮುಲೆಯಾಳಾಕs ವಚ್ಚೆ ಪಯ್ಲೆ ಕಾನ್ನಾ ಪಾಳ್ಯೊ ಪಿಂದ್ಲೊ,"
(ಮಲೆಯಾಳ ದೇಶಕ್ಕೆ ಹೋಗುವ ಮೊದಲು ಕಿವಿ ಹರಿದು ಕೊಂಡರು.)

ಕೂಸು ಹುಟ್ಟುವಮೊದಲು ಕುಲಾವಿ ಹೊಲಿಸಿದ ಹಾಗೆ.

೪ "ಗೊಬ್ಬೊರು ದೇಕsನಾಶಿಲ್ಯಾನs ಪೀಟsದೆಕ್ಕಿಲ್ಯಾವಾರಿ."
(ಗೊಬ್ಬರ ಕಾಣದವನು ಹಿಟ್ಟು ಕಂಡತೆ.)

ಹಂಚು ಕಾಣದವಳು ಕಂಚು ಕಂಡಳು.

೫ "ಬರಿಲ್ಲ್ಯಾ ಬ್ರಾಹ್ಮಣಾಂಕs ಧಹ್ಯಾಂತು ಫಾತ್ತ್ರೂರು."
(ಹೊಟ್ಟೆ ತುಂಬಿದ ಬ್ರಾಹ್ಮಣನಿಗೆ ಮೊಸರಿನಲ್ಲಿ ಕಲ್ಲು.)
ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು.

೬ "ವಾಂಕ್ಡಿ ತಿಂಕ್ಡಿ ಸೇವಾ, ಪಾವರೇ ತೂ ದೇವಾ!"
(ಸೊಟ್ಟ ಡೊಂಕು ಸೇವೆ, ನೀನೇ ಕಾಯಪ್ಪಾ ಹರಿಯೇ!)

೭ "ಗರುಡಾ ಗಾಂವಾಂತು ನಾಗರಪಂಚಮಿ"
(ಗರುಡನ ಊರಲ್ಲಿ ನಾಗರಪಂಚಮಿ.) ಈ ಗಾದೆ ಕನ್ನಡದಲ್ಲಿಯೂ ಇದ್ದಹಾಗಿದೆ.
ಕಟುಕರ ಅಂಗಡಿಯಲ್ಲಿ ಬಸವನ ಪುರಾಣ ಹೇಳಿದಹಾಗೆ.

೮ "ಮಾಳ ಪೈಕs ಜೋರು ಆಯ್ಲ್ಯಾರಿ, ಸಂಗ್ರಾಮಾಕ (?) ಪೇಜವೇ ?"
(ಮಾಳಪೈಗಳಿಗೆ ಜ್ವರಬಂದರೆ, ಊರಿನವರಿಗೆಲ್ಲ ಗಂಜಿಯೇ ?)
ರಾಯರ ಹೆಂಡತಿ ಸತ್ತರೆ ಊರೆಲ್ಲ ತಿಣಕಬೇಕೆ ?

೯ "ಪಿಂಡಾಕs ಆಂಡs ಲಾಯಿಲ್ಯಾವಾರಿ."
(ಪಿಂಡಕ್ಕೆ ಅಂಡವನ್ನು ಮುಟ್ಟಿಸಿದ ಹಾಗೆ.)
ಅಜ್ಜ ನೆಟ್ಟ ಆಲದ ಮರಕ್ಕೆ ನೇಣುಹಾಕಿಕೊಂಡಂತೆ.

೧೦ "ಕಾವ್ಯಾಕs ತವ್ಯಾರಿ ದೋಳೋ, ಮಾಜ್ರಾಕs ಬೊಪ್ಯಾರಿದೋಳೆ."
(ಕಾಗೆಗೆ ಸವತೆಯ ಮೇಲೆ ಕಣ್ಣು, ಬೆಕ್ಕಿಗೆ ಬೊಪ್ಪಿಮೀನಿನ ಮೇಲೆ ಕಣ್ಣು.)
ಅಜ್ಜಿಗೆ ಗೆಜ್ಜೆ ಚಿಂತೆ, ಮೊಮ್ಮಗಳಿಗೆ ಮಿಂಡನ ಚಿಂತೆ.

ಮೇಲೆ ಉದಾಹರಣೆಗಾಗಿ ಕೊಟ್ಟ ಗಾದೆಗಳಲ್ಲಿ ಕಂಡು ಬರುವ ಜೀವನಾನುಭವ ಶುದ್ಧ ಕೊಂಕಣಿಯು ವಾತಾವರಣ ದಿಂದ ಬಂದದ್ದು. "ವಾಂಕ್ಡಿ ತಿಂಕ್ಡಿ ಸೇವಾ.......", ಎಂದು ಪರಮಾತ್ಮನನ್ನು ಮೊರೆಹೋಗುವಲ್ಲಿ, "ಗರುಡಾ ಗಾಂವಾಂತು ನಾಗರ ಪಂಚಮಿ" ಎಂದು ಹೇಳುವಲ್ಲಿ ಎರಡೂ ಭಾಷೆಗಳಲ್ಲಿನ ಅನುಭವ ಸಾಮ್ಯ, "ಪಿಂಡಾಕ್ಸ ಆಂಡ ಲಾಯಿಲ್ಯಾವಾರಿ"- ಎಂದು, ಮುತ್ತಜ್ಜ ಶ್ರಾದ್ಧದ ವೇಳೆಯಲ್ಲಿ ಪಿಂಡಕ್ಕೆ ಆಂಡ ಸ್ಪರ್ಶಮಾಡುತ್ತಿದ್ದನೆಂದು (ಅದು ಆವನ ನ್ಯೂನತೆಯೆಂಬು ದನ್ನು ಕೂಡ ವೈಜ್ಞಾನಿಕವಾಗಿ ಗಮನಿಸದೆ,) ಆ ಆಚಾರವನ್ನೇ ಮುಂದುವರಿಸುವಲ್ಲಿನ ಮುಂದಿನ ಪೀಳಿಗೆಯು ಮೌಢ್ಯ ಹಾಗೂ ಅಂಧಶ್ರದ್ಧೆಗಳು, "ಕಾವ್ಯಾಕ್ಸ ತವ್ಯಾರಿ ದೋಳೊ, ಮಾಜ್ರಾಕ್ಸ ಬೊಪ್ಯಾರಿ ದೋಳೊ"— ಎನ್ನುವಲ್ಲಿ, ಇಬ್ಬ ರಿಗೂ ಇರುವ ಚಿಂತೆಯನ್ನು ಹೇಳಿ, ಬೆಕ್ಕಿಗೆ "ಬೊಪ್ಪಿಮೀನಿನ ಮೇಲೆ ಕಣ್ಣು ಎಂದು ಹೇಳುವದು (ಕನ್ನಡದಲ್ಲಿ ಅಜ್ಜಿಗೆ ಗೆಜ್ಜೆ ಚಿಂತೆ, ಮೊಮ್ಮಗಳಿಗೆ ಮಿಂಡನ ಚಿಂತೆ ಎಂಬಂತೆ)— ಮೊದ ಲಾದ ಕೊಂಕಣಿ ಗಾದೆಗಳಲ್ಲಿನ ಸ್ವಂತಿಕೆ, ವೈಶಿಷ್ಟ್ಯ, ಜಾನಾಂಗಿಕ ಸಂಸ್ಕೃತಿ, ಭಾಷೆಯ ಬಳಕೆಗಳನ್ನು ಗಮನಿಸ ಬಹುದು.

ಈ ರೀತಿಯ ಕನ್ನಡ-ಕೊಂಕಣಿ ಉದಾಹರಣೆಗಳನ್ನು ಎಷ್ಟಾದರೂ ಕೊಡುತ್ತ ಹೋಗಬಹುದು. ವಿಸ್ತಾರಭಯದಿಂದ ಈ ಗಾದೆಗಳ ಪ್ರಕರಣವನ್ನು ಇಲ್ಲಿಗೆ ಮೊಟುಕುಗೊಳಿಸಿ, ಕೊನೆಯಲ್ಲಿ ಇಷ್ಟು ಹೇಳಬಹುದು: ಕನ್ನಡ-ಕೊಂಕಣಿಗಳಾ

ಗಲಿ, ಇತರ ಬೇರೆ ಎರಡು ಭಿನ್ನ ಭಾಷೆಗಳಾಗಲಿ, ಇಂತಹ ತೌಲನಿಕ ಅಧ್ಯಯನದಿಂದ ಭಾಷಾಭ್ಯಾಸಿಯು ಎಲ್ಲ ಭಾರತೀಯ ಭಾಷೆಗಳಲ್ಲಿ ವ್ಯಕ್ತವಾದ 'ಭಾರತೀಯ ಜೀವನ ದೃಷ್ಟಿ'ಯ ಸಾಮ್ಯಗಳನ್ನು (ಜೊತೆಗೆ ವೈದೃಶ್ಯಗಳನ್ನೂ, ಅವಿದ್ದರೆ) ಕಾಣ ಬಹುದು. ಈ ಬಗೆಯ-ಅಭ್ಯಾಸ ಸಮಾಜಶಾಸ್ತ್ರಜ್ಞ, ಮಾನವ ಶಾಸ್ತ್ರಜ್ಞ ಹಾಗೂ ಭಾಷಾಶಾಸ್ತ್ರಜ್ಞರಿಗೆ ವಿಪುಲ ಆಹಾರವನ್ನು ಒದಗಿಸಬಲ್ಲುದು.

೬ ಕೊನೆಯ ಮಾತು

ಇದುವರೆಗೆ ನನ್ನ ಪರಿಮಿತ ಸಂಗ್ರಹದಲ್ಲಿರುವ ಕೊಂಕಣಿ ಜನಪದ ಕಥೆ, ಗೀತ, ಒಗಟು ಹಾಗೂ ಗಾದೆಗಳನ್ನು ಕನ್ನಡದ ಇದೇ ಬಗೆಯ ಸಾಹಿತ್ಯ ಪ್ರಕಾರಗಳೊಡನೆ ತೌಲನಿಕ ದೃಷ್ಟಿಯಲ್ಲಿ ಪರಿಶೀಲಿಸಿದ್ದಾಯಿತು. ಕೊಂಕಣಿ ಜನಪದಸಾಹಿತ್ಯ ಸಂಗ್ರಹಣೆಯ ಕೆಲಸ ಈ ತನಕವೂ ಆಮೆಗತಿಯಲ್ಲಿ ಸಾಗಿರುವದರಿಂದ, ಈ ತೌಲನಿಕ ಪರಿಶೀಲನೆಯ ಇತಿ–ಮಿತಿಗಳ ಅರಿವು ನನಗಿದೆ. ಆದರೂ ಒಂದು ಭಾಗದ ಕೊಂಕಣಿ ಜನಪದ ಸಾಹಿತ್ಯದೊಡನಾದರೂ, ಕನ್ನಡದ ಜನಪದ ಸಾಹಿತ್ಯವನ್ನು ಜೊತೆಜೊತೆಗೆ ಇಟ್ಟು— ಎರಡರ ವೈಶಿಷ್ಟ್ಯಗಳನ್ನು ಸಂಕ್ಷೇಪವಾಗಿಯಾದರೂ ಪರೀಶೀಲಿಸಿದ ಸಮಾಧಾನ ನನಗಿದೆ. ಜೊತೆಗೆ ಕನ್ನಡಿಗರಿಗೆ ತಮ್ಮ ವರ್ಗದ (ದ್ರಾವಿಡ ವರ್ಗದ) ಭಾಷೆಗಳಿಂದ ಭಿನ್ನವಾದ ಆರ್ಯಭಾಷಾ ವರ್ಗಕ್ಕೆ ಸೇರಿದ ಕೊಂಕಣಿಯ ಜನಪದ ಸಾಹಿತ್ಯದ ಸ್ವಲ್ಪಮಟ್ಟಿಗಿನ ಪರಿಚಯವಾದರೂ ನನ್ನ ಈ ಶ್ರಮ ಸಾರ್ಥಕವೆಂದು ತಿಳಿದಿದ್ದೇನೆ.

ಆಧುನಿಕ ಯುಗದ ತೀವ್ರ ಅಭಿಯೋಗದಿಂದ ಎಲ್ಲ ಭಾಷೆಗಳ ಜನಪದ ಸಾಹಿತ್ಯವೂ ಇಂದು ನಮ್ಮ ಕಣ್ಮರೆಯಾಗುತ್ತಲಿದೆ. ಈ ಮಾತಿಗೆ ಕನ್ನಡ-ಕೊಂಕಣಿಗಳೇನೂ ಹೊರತಲ್ಲ. ಕನ್ನಡದಲ್ಲಿ ಜನಪದ ಸಾಹಿತ್ಯ ಸಂಗ್ರಹದ ಕೆಲಸ ಸಾಕಷ್ಟು

ಪ್ರಮಾಣದಲ್ಲಿ ನಡೆಯುತ್ತಲಿದೆಯೆಂದು ಈ ಮೊದಲೇ ಹೇಳಿಯಾಗಿದೆ. ನನ್ನ ಪ್ರಸ್ತುತ ಪರಿಶೀಲನೆ- ಎಲ್ಲ ಭಾಗದ ಕೊಂಕಣಿಗರಿಗೆ ತಮ್ಮ ಭಾಷೆಯಲ್ಲಿನ ಅಕ್ಷಯ ನಿಧಿಯಾದ "ಜನಪದ ಸಾಹಿತ್ಯ"ವನ್ನು ಸಂಗ್ರಹಿಸಲು ಸ್ವಲ್ಪವಾದರೂ ಪ್ರೇರಣೆ ಇತ್ತರೆ ಖಂಡಿತವಾಗಿಯೂ ನನ್ನ ಶ್ರಮಕ್ಕೆ ಅದು ಪ್ರತಿಫಲವೆಂದು ಭಾವಿಸಿದ್ದೇನೆ. ಈ ದಿಶೆಯಲ್ಲಿ ಎಲ್ಲ ಕೊಂಕಣಿಬಾಂಧವರೂ ತಮ್ಮ ತಮ್ಮ ಭಾಗಗಳ ಜನಪದ ಸಾಹಿತ್ಯವನ್ನು ಕಲೆಹಾಕುವ ಕೆಲಸದಲ್ಲಿ ತಕ್ಷಣ ಕಾರ್ಯಪ್ರವೃತ್ತರಾಗಬೇಕೆಂದು ಅತ್ಯಂತ ಕಳಕಳಿಯಿಂದ ಭಿನ್ನವಿಸಿಕೊಳ್ಳುತ್ತೇನೆ. ಮೊದಲು ನಡೆಯಬೇಕಾದದ್ದು ಈ ಬಗೆಯ ಸಾಹಿತ್ಯವನ್ನು ಕಲೆಹಾಕುವ ಕೆಲಸ. ಅದರ ಗುಣಾವಗುಣಗಳೇನೇ ಇರಲಿ; ಸಂಗ್ರಹ ಕೆಲಸವೇ ನಡೆಯದಾಗ ಹೇಳುವದೇನನ್ನು ? ಸಾಕಷ್ಟು ಸಂಗ್ರಹ ನಡೆದಮೇಲೆ, ಈ ಎಲ್ಲ ಬಗೆಯ ಸಾಹಿತ್ಯ ಪ್ರಕಾರಗಳ ಬೆಲೆಕಟ್ಟಬಹುದಾಗಿದೆ.

ಕನ್ನಡ, ತಮಿಳು, ತೆಲುಗು, ಮಲೆಯಾಳ, ತುಳು- ಮೊದಲಾದ ದ್ರಾವಿಡ ವರ್ಗದ ಭಾಷೆಗಳಾಗಲಿ, ಕೊಂಕಣಿ, ಬಂಗಾಲಿ, ಹಿಂದಿ, ಸಿಂಧಿ, ಕಾಶ್ಮೀರಿ, ಗುಜರಾಥಿ, ಮರಾಠಿ ಮೊದಲಾದ ಆರ್ಯಭಾಷಾ ವರ್ಗಕ್ಕೆ ಸೇರಿದ ಭಾಷೆಗಳಾಗಲಿ, ತಮ್ಮ ಅಂತಸ್ಸತ್ವದಲ್ಲಿ ಪೋಷಣೆ ಹೊಂದಿರುವದು ಒಂದೇ ಒಂದಾದ ಅಖಂಡವಾದ "ಭಾರತೀಯ ಸಂಸ್ಕೃತಿ"ಯಿಂದ. ಈ ದೃಷ್ಟಿಯಿಂದ ಭಾರತದ ಈ ಎಲ್ಲ ದೇಶೀಯ ಭಾಷೆಗಳು ಒಂದೇ ಭಾರತ ಸಂಸ್ಕೃತಿಯೆಂಬ ತಾಯಿಬೇರಿನ ಆಗಂತುಕ ಬೇರುಗಳಿದ್ದಂತೆ. ಇವುಗಳ ಪೋಷಣೆಮಾಡುವದು ಹಾಗೂ ಇವು

ಗಳಿಂದ ಪೋಷಣೆ ಹೊಂದುವುದು- ಆ ಅಖಂಡ ಸಂಸ್ಕೃತಿ ಪರಂಪರೆಯನ್ನು ಪುನರುತ್ಥಾನಗೊಳಿಸಲು. ಈ ರೀತಿ ಪ್ರಸ್ತುತದ ಈ ತೌಲನಿಕ ಪರಿಶೀಲನೆ- ಶತಮಾನಗಳಿಂದ ಬೆಳೆದು ಬಂದ 'ಕನ್ನಡ ಸಂಸ್ಕೃತಿ' ಹಾಗೂ 'ಕೊಂಕಣಿ ಸಂಸ್ಕೃತಿ'ಗಳನ್ನು, ಪರಿಚಯಮಾಡಿಕೊಳ್ಳಲು ಸಹಾಯಕವಾಗಿ, ನಾವು ಬಹಳ ಕಾಲದಿಂದಲೂ ಕನಸುಕಾಣುತ್ತಿರುವ-ರಾಷ್ಟ್ರೀಯ ಭಾವೈಕ್ಯ ವನ್ನು ಕುದುರಿಸಲು ಪ್ರೇರಕವಾಗಲೆಂದು ಹಾರೈಸಿ ಈ ಬರೆಹವನ್ನು ಮುಗಿಸುತ್ತೇನೆ.

ಉಪನ್ಯಾಸ ಗ್ರಂಥಮಾಲೆಯ
ಇತ್ತೀಚಿನ ಪ್ರಕಟನೆಗಳು

1 ಭಾರತದಲ್ಲಿ ಭೂಅಭಿವೃದ್ಧಿ ಬ್ಯಾಂಕುಗಳು —ಟಿ.ಎಂ. ಪಂಡಿತ

2 ರವೀಂದ್ರರ ಶೈಕ್ಷಣಿಕ ತತ್ವಜ್ಞಾನ —ಅನಂತ ಕುಲಕರ್ಣಿ

3 ಷೇಕ್ಸಪಿಯರನ ನಾಟಕಗಳಲ್ಲಿ
ಸಾಮಾಜಿಕ ಪ್ರಜ್ಞೆ —ವ್ಹಿ. ಕೆ. ನವಲಗುಂದ

4 ಗುಹ್ಯರೋಗಗಳು —ಎಸ್. ಜೆ. ನಾಗಲೋಟಿಮಠ

5 ನಾರುಹುಣ್ಣು —ಎಸ್. ಎಸ್. ನರಸಣಗಿ

6 ಕೈಮಗ್ಗದ ಉದ್ದಿಮೆಯ ಅಭಿವೃದ್ಧಿ —ವ್ಹಿ. ಬಿ. ಅಂಗಡಿ

7 ಬಣ್ಣಗಳು ಹಾಗು ಬಣ್ಣ ಹಾಕುವ ಕಲೆ —ಜಿ. ಎ. ಕಲ್ಲೂರ

8 ಭಾರತದ ಆದಿವಾಸಿಗಳು —ಸಿ. ಆರ್. ಮದಭಾವಿ

9 ಬಾನುಲಿ ಬರೆವಣಿಗೆ —ಎನ್. ಕೆ. ಕುಲಕರ್ಣಿ

10 ಪಾಣಿನಿ —ಕೆ. ಕೃಷ್ಣಮೂರ್ತಿ

11 ಎಡೆದೊರೆ ನಾಡಿನ ಅನುಭಾವಿ ಕವಿಗಳು —ಶಾಂತರಸ

ವ್ಯಾಸಂಗ ವಿಸ್ತರಣ — ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩